

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

SK NEWS ಕನ್ನಡ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

Volume : 06 Issue : 306 Thursday 25-04-2024 E-mail : maruti.b.hosamani76@gmail.com Page: 4 Price : Rs. 1/-


## ಧರ್ಮದ ದಾರಿಯಲ್ಲಿ ನಡೆದ ಎನ್ ವೈ ಗೋಪಾಲಕೃಷ್ಣ, ಬಡವರ್ಗದ ನಾಯಕ, ಪ್ರಿಯಾಂಕ್ ಗಾಂಧಿ ಚಿತ್ರದುರ್ಗ



**ಚಿತ್ರದುರ್ಗ :** ಚಿತ್ರದುರ್ಗ ನಗರದಲ್ಲಿ ಲೋಕಸಭಾ ಚುನಾವಣೆ ಪ್ರಚಾರ ಕಾರ್ಯಕ್ರಮದಲ್ಲಿ ಎನ್ ವೈ ಗೋಪಾಲಕೃಷ್ಣ ಶಾಸಕರು ಭಾಗವಹಿಸಿ ಚಿತ್ರದುರ್ಗ ಜಿಲ್ಲೆಗೆ ಬಲ ಕೊಟ್ಟಂತ ಶಾಸಕರು ಕಾಂಗ್ರೆಸ್ ಪಕ್ಷದ ಇಂದಿರಾ ಗಾಂಧಿ ಸೋನಿಯಾ ಗಾಂಧಿ ತತ್ವ ಸಿದ್ಧಾಂತಗಳನ್ನು ಒಪ್ಪಿ ಎನ್ ವೈ ಗೋಪಾಲಕೃಷ್ಣ ಶಾಸಕರು ಬಿಜೆಪಿ ಬಿಟ್ಟು ಮರಳಿ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿ 2023ನೇ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ 136 ಎಂಎಲ್ಎ ಗಳಿಗೆ ಶಕ್ತಿ ಕೊಟ್ಟಂತ ಎನ್ ವೈ ಜಿ ಶಾಸಕರು ಇವರು ವಿಧಾನ ಸಭಾ ಚುನಾವಣೆಯಲ್ಲಿ ನುಡಿದಂತೆ ನಡೆಯಿತು ಈ ಸಲ ನಾವು ತಮ್ಮ ಪಕ್ಷ ಖಂಡಿತವಾಗಿ ಸರ್ಕಾರ ನಡೆಸುತ್ತೇವೆ ಪ್ರಬಲ ಸ್ವಂತ ಬಹುಮತವಾಗಿ ಸೀಟುಗಳು ಗೆಲ್ಲುತ್ತೇವೆ. ಎಂದು ಘಂಟಾಘೋಷವಾಗಿ ಮಾತನಾಡಿದಂತೆ ಎನ್ ವೈ ಗೋಪಾಲಕೃಷ್ಣ ಶಾಸಕರು ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎಂಬುವಂತ ಇವರ ಮಾತುಗಳು ಅಷ್ಟೊಂದು ಗಂಭೀರವಾಗಿರುತ್ತದೆ ಇವರ ಶಕ್ತಿ ದೊಡ್ಡದು ಇವರದು ಸಮುದ್ರದ ಆಲೆಗಳು ಇದ್ದಾಗೆ ಇವರ ಅಣ್ಣನಾದ ನಿವೃತ್ತಿ ನ್ಯಾಯಮೂರ್ತಿಗಳು ಮೂರು ರಾಜ್ಯಗಳಲ್ಲಿ ಸೇವೆ ಸಲ್ಲಿಸಿ ಕರ್ನಾಟಕ ರಾಜ್ಯದಲ್ಲಿ ಎನ್ ವೈ ಹನುಮಂತಪ್ಪನವರು ಕೀರ್ತಿ ತಂದಿದ್ದಾರೆ ಇವರು ಸಹ ಕಾಂಗ್ರೆಸ್ ಪಕ್ಷದಲ್ಲಿ ಚಿತ್ರದುರ್ಗ ಲೋಕಸಭಾ ಸದಸ್ಯರಾಗಿ ಎಲ್ಲಾ ಬಡವರ್ಗದ ಜನರಿಗೆ ನ್ಯಾಯ ನೀತಿಯಾಗಿ ಆಡಳಿತ ಸೇವೆ ಸಲ್ಲಿಸಿದ್ದಾರೆ ಲೋಕಸಭಾ ಸದಸ್ಯರು ಎನ್ ವೈ ಹನುಮಂತಪ್ಪನವರ್ ಎನ್ ವೈ ಜಿ ಕುಟುಂಬದ ಒಪ್ಪಿ ಹೈಕಮಾಂಡ್ ನಂಬಿ ಪಕ್ಷಕ್ಕೆ ದುಡಿದಿದ್ದೀರಿ ಅಧಿನಾಯಕಿ ಪ್ರಿಯಾಂಕಾ ಗಾಂಧಿ ಅವರು ನೀವು ಧರ್ಮದ ಹಾದಿಯಲ್ಲಿ ನಡೆಯುತ್ತಿದ್ದೀರಿ ನ್ಯಾಯದ ಮಾರ್ಗದಲ್ಲಿ ಹೋಗುತ್ತಿದ್ದೀರಿ ಆಡಳಿತದಲ್ಲಿ ಆರು ಬಾರಿ ಕಾಂಗ್ರೆಸ್ ಪಕ್ಷದಲ್ಲಿ ಶಾಸಕರಾಗಿ ಒಂದು ಬಾರಿ ಬಿಜೆಪಿ ಪಕ್ಷದಲ್ಲಿ ಶಾಸಕರಾಗಿ ಒಟ್ಟು ಏಳು ಬಾರಿ ಶಾಸಕರಾಗಿ ರಾಜ್ಯದಲ್ಲಿ ಒಂದು ಕೀರ್ತಿ ತಂದಿದ್ದೀರಿ ಅದೇನಪ್ಪಾ ಅಂದರೆ ಧರ್ಮವೇ ಉಳಿಯಬೇಕು ಎಲ್ಲಾ ಬಡವರ್ಗದ ಜನ ಸಾಮಾನ್ಯರ ಕಷ್ಟಗಳ ಕಾಪಾಡಬೇಕು ಎನ್ನುವಂತ ಶಾಸಕರು ನೀವು ಕೃಷ್ಣ ಪರಮಾತ್ಮ ಲೀಲೆ ಇದ್ದಾಗೆ ಶ್ರೀ ಕೃಷ್ಣ ಪರಮಾತ್ಮನ ಇದ್ದ ಕಡೆಗೆ ಯಾವತ್ತಿಗೂ ಜಯವೇ ಉಂಟಾಗುವುದು ಏಳು ಬಾರಿ ಶಾಸಕರಾದರೆ ಯಾವುದೇ ತರಹ ಕಪ್ಪು ಚುಕ್ಕೆ ಇಲ್ಲದ ಹಾಗೆ ಆಡಳಿತ ನಡೆಸಿಕೊಂಡು ಜನ ಸಾಮಾನ್ಯರ ಕೆಲಸಗಳನ್ನು ಮಾಡಿದ್ದೀರಿ ಇಷ್ಟು ನಿಯತ್ತಾಗಿ ಕೆಲಸ ಮಾಡಿದರು ಮಂತ್ರಿ ಸ್ಥಾನ ಪಡೆಯಲಿಲ್ಲ ಎನ್ ವೈ ಜಿ ನನಗೆ ಮಂತ್ರಿ ಸ್ಥಾನ ಬೇಕು ಅಂತ ಆಟ ಮಾಡಿದವರಲ್ಲ ಎನ್ ವೈ ಜಿ ಇವುಗಳೆಲ್ಲ ಅರ್ಥ ಮಾಡಿಕೊಳ್ಳಬೇಕು ರಾಜ್ಯ ಆಳುವಂತ ಮುಖ್ಯಮಂತ್ರಿಗಳು ಸಿದ್ದರಾಮಯ್ಯನವರ ಮತ್ತು ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಇವರು ಪರಿಗಣನೆಗೆ ತೆಗೆದು ಕೊಳ್ಳಬೇಕು ಇವರಿಗೆ ಜೊತೆಯಲ್ಲಿ ಮೂರು ವಿಧಾನ ಸಭಾ ಕ್ಷೇತ್ರದ ಜವಾಬ್ದಾರಿ ವಹಿಸಿಕೊಂಡಂತ ಶಾಸಕರು ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಎನ್ ವೈ ಗೋಪಾಲಕೃಷ್ಣರವರು ಈ ಸಂದರ್ಭದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ರಣದೀಪ್ ಸಿಂಗ್ ಸರ್ಜವಾಲ,ಸಚಿವರು,ಶಾಸಕರು ಕಾರ್ಯಕರ್ತರು ಅಪಾರ ಸಂಖ್ಯೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಅಭಿಮಾನಿಗಳು ಮೊದಲದವರಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ತಿಪ್ಪೇಸ್ವಾಮಿ.ಹೊಂಬಾಳೆ ಮೊಳಕಾಲ್ಮುರು**

## ಬುರುಡೆ ಬುಡುವರಂತೆ ಬಿಇಒ "ಪದ್ಮನಾಭ ಕರಣಂ'

**ಕೊಟ್ಟೂರು :** ನಮ್ಮ ದೇಶಕ್ಕೆ ಕೊಡುಗೆ ನೀಡಿರುವ ಮಹಾ ನಾಯಕರು ಈ ಪುಣ್ಯ ಭೂಮಿಯಲ್ಲಿ ಸವಿ ನೆನಪಿಗಾಗಿ ಅವರು ಹುಟ್ಟಿದ ದಿನದ ಜಯಂತಿಯನ್ನು ಆಚರಿಸಲಾಗುತ್ತದೆ. ಯಾರು ಜಾತಿಯ ಅರ್ಜಿಯನ್ನು ಹಾಕಿಕೊಂಡು ಹುಟ್ಟುವುದಿಲ್ಲ ಆದರಿಂದ ಅದನ್ನು ಲೆಕ್ಕಿಸ ಬಾರದು. ನಾಯಕರು ಅವರು ಯಾವ ಜಾತಿಗೆ ಸೇರಿದವರು, ಅಥವಾ ಯಾವ ಜನಾಂಗ ಸೀಮಿತರಾಗಿರುವರು, ಎಂಬುದಕ್ಕಿಂತ ಅವರು ನಮ್ಮ ದೇಶಕ್ಕೆ ಕೊಟ್ಟಿರುವ ಕೊಡುಗೆ ಏನು? ಎಂಬುದು ಬಹಳ ಮುಖ್ಯ. ಅದನ್ನು ಅರಿಯದೇ ಕೆಲವರು ಅವರ ಜಾತಿಯನ್ನು ಪರಿಗಣಗೆ ತೆದುಕೊಂಡು, ಅವರ ಜಯಂತಿ ದಿನ ಶಾಲೆ ಮತ್ತು ಕಾಲೇಜುಗಳನ್ನು ಬೀಗ ಹಾಕಿ ಬರದೆ ಇರುವುದು,ಬಂದರು ಸರಕಾರದ ಸುತ್ತೋಲೆ ಇದೆ ಎಂದು ಸರಕಾರದ ಒತ್ತಾಯಕ್ಕೆ ಜಯಂತಿ ಆಚರಣೆ ಮಾಡುವುದು, ಒಲ್ಲದ ಮನಸ್ಸಿನಿಂದ ಮಾಡುವುದು, ಬೇರೆಯವರ ಒತ್ತಾಯಕ್ಕೆ ಮಣಿದು ಮಾಡುವುದು, ಬೇಕಾಬಿಟ್ಟಿ ಮಾಡುವುದು, ಮಾಡದಿದ್ದರೂ ಮಾಡಿದ್ದೇವೆ ಎಂದು ಯಾವುದೋ ಮಾಡಿರುವ ಹಳೆ ಪೋಟೋ ಹಾಕುವುದು, ಜಿಪಿಎಸ್ ಪೋಟೋ ಕಡ್ಡಾಯ ಎಂದು ತಿಳಿದಿದ್ದರು, ಜಿ ಪಿ ಎಸ್ ಪೋಟೋವನ್ನು ಕ್ಯಾಂಬ್ರದಲ್ಲಿ ಸೆರೆ ಹಿಡಿಯದೆ ಇರುವುದು, ನಮ್ಮ ಹತ್ತಿರ ಪೋನ್ ಇಲ್ಲ ಅದಕ್ಕೆ ಪೋಟೋ ತೆಗೆದಿಲ್ಲ, ಸಿಮ್ ಆಗಲ್ಲೀ, ಪೋನ್ ಆಗಲ್ಲೀ ಸರಕಾರ ನಮಗೆ ಕೊಟ್ಟಿಲ್ಲ, ಅದಕ್ಕೆ ಪೋಟೋ ತೆಗೆದಿಲ್ಲ ಎಂದು ಹೇಳುವುದು ಇವು ಎಲ್ಲವೂ ಒಳ್ಳೆಯ ನಡತೆ ಅನಿಸುದಿಲ್ಲ. ಕೆಲವು ಬಲ್ಲವರು ಮತ್ತು ಸಾಹಿತಿಗಳು ಹೀಗೆ ನೆಪ ಹೇಳುವುದು ಒಳ್ಳೆಯ ನಡತೆಗಳಲ್ಲ ಎಂದು ಹೇಳುವರಂತೆ. ಒಳ್ಳೆಯ ಮನಸ್ಸಿಯಿಂದ ಜಯಂತಿ ಮತ್ತು ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಎಲ್ಲರಿಗೂ ನಮ್ಮ ಸಾಮಾಜಿಕ ಮಾಧ್ಯಮ ಮತ್ತು ನ್ಯೂಸ್ ಚಾನೆಲ್ ನಿಂದ ಒಂದು 'ಹ್ಯಾಟ್ಸ್ ಆಫ್' ಹೇಳಿ ಬಿಡೋಣ. ವಿಜಯನಗರ ಜಿಲ್ಲೆ ಕೊಟ್ಟೂರು ಹೊಸ ತಾಲೂಕಿನ ಕೆಲವು ಶಾಲಾ ಕಾಲೇಜುಗಳಲ್ಲಿ ತಮ್ಮ ಮನಸ್ಸಿನಲ್ಲಿ ಯಾವುದೋ ಭಾವನೆಗಳನ್ನು ಇಟ್ಟು ಕೊಂಡು ಅಥವಾ ಉದ್ದೇಶ ಪೂರ್ವಕವಾಗಿಯೇ ಕೆಲವು ಶಾಲಾ ಕಾಲೇಜಿನಲ್ಲಿ ಅಂಬೇಡ್ಕರ್ ಜಯಂತಿ ಆಚರಣೆಯನ್ನು ಮಾಡದೇ ಇದ್ದಿದ್ದು, ದಲಿತ ಮುಖಂಡರ ಗಮನಕ್ಕೆ ಬಂದ್ದಾಗ, ದಲಿತ ಯುವಕರು ಮತ್ತು ಮುಖಂಡರು ಜಯಂತಿ ಆಚರಣೆ ಮಾಡಿರುವ ಎಲ್ಲಾ ಶಾಲಾ ಕಾಲೇಜುಗಳ ಜಿ ಪಿ ಎಸ್ ಪೋಟೋದ ಒಂದು ಪ್ರತಿಯನ್ನು ಕೊಡುವಂತೆ ಕೂಡ್ಲಿಗಿ ಮತ್ತು ಕೊಟ್ಟೂರು ಕ್ಷೇತ್ರ ಶಿಕ್ಷಣ ಅಧಿಕಾರಿಗಳಾದ 'ಪದ್ಮನಾಭ ಕರಣಂ' ರವರನ್ನು ಒತ್ತಾಯಿಸಿದ್ಧಕ್ಕೆ, ಅವರು ತಕ್ಷಣ ಮೇಸೇಜ್ ಹಾಕಿ, ಆ ಮೇಸೇಜು ಸಂದೇಶ ಬಂದ ಮೇಲೆ ಆಚರಣೆ ಮಾಡಿರುವರಂತೆ, ಇನ್ನು ಕೆಲವು ಶಾಲಾ ಕಾಲೇಜಿನವರು ಹಳೆಯ ಪೋಟೋ ಹಾಕಿ, ಈಗ ಮಾಡಿರುವೆವು ಎಂದು ಬಿಗುಮಾನದಿಂದ ಹೇಳಿ ಕೊಂಡಿರುವರಂತೆ. ಇನ್ನು ಕ್ಷೇತ್ರ ಶಿಕ್ಷಣ ಅಧಿಕಾರಿಗಳನ್ನು ಮಾಧ್ಯಮವರು ಕೇಳಿದರೆ, ಯಾವ ಶಾಲಾ ಕಾಲೇಜುಗಳು ಮಾಡಿರುವರು,ಯಾವ ಶಾಲಾ ಕಾಲೇಜಿನಲ್ಲಿ ಮಾಡದೇ ಇರುವರು ಎಂಬುದು ನಮಗೆ ಗೊತ್ತಿಲ್ಲ, ವರದಿ ಬಂದ ಮೇಲೆ ಕೇಳಿ ಹೇಳುತ್ತೇನೆ. ಎಂದು ಚಾಣಕ್ಷತನದ ಜಾರಿಕೆಯ ಉತ್ತರ ನೀಡುವರಂತೆ ಈ ಬುದ್ಧಿವಂತ ಅಧಿಕಾರಿ.



ಈ ಅಸ್ಸಾಮಿ ಈ ಪೋಟೋ ತೆಗೆದುಕೊಂಡು ಏನು ಮಾಡುವಿರಿ? ಜಯಂತಿ ಆಚರಣೆ ಕಡ್ಡಾಯವಾಗಿ ಮಾಡಬೇಕು ಎಂದು ನಮ್ಮಗೆ ತಹಸೀಲ್ದಾರ್ ರವರು ಮೆಮೋ ಹಾಕಿಲ್ಲ, ಆದರೂ ಆಚರಣೆ ಮಾಡಿದ್ದೇವೆ. ನಮಗೆ, ನಿಮಗೆ ಪೋಟೋ ಕೊಡಲು ಸ್ವಲ್ಪ ಸಮಯಬೇಕು, ಕೋಡುವ ತನಕ ಕಾಯಬೇಕು.ಎಷ್ಟು ದಿನ ಎಂದು ಕೇಳಿದರೆ, ಒಂದು ನಾಲ್ಕು ಐದು ದಿವಸ ಸಮಯಬೇಕು, ಅದನ್ನು ರೆಡಿಮಾಡಿ ಕೊಡಬೇಕಲ್ಲ ಎಂದು ತನ್ನ ಬುರುಡೆ ಮಾತುಗಳಿಂದ, ಬೋಗಳೆ ಬಿಡುವರಂತೆ. ತನ್ನ ತಲೆಯಲ್ಲಿ ಇರುವ ಬುದ್ಧಿಯನೆಲ್ಲಾ ಉಪಯೋಗಿಸಿ ನನಗೆ ಯಾರು ಒಂದು ಐದು ನೂರು ರೂಪಾಯಿ ಕೊಡುವುದಿಲ್ಲ, ಪುಕ್ಸಟ್ಟೆಯಾಗಿ ಕೆಲಸ ಮಾಡಿಸಿಕೊಂಡು ಹಾಗೇ ಹೋಗುವರು. ಮತ್ತೆ ೪, ೫ ದಿವಸ ಬಿಟ್ಟು ಹೋದರೆ, ಸಿಬ್ಬಂದಿಗಳು ಯಾರು ಇಲ್ಲ, ನಾನು ಒಬ್ಬನೇ ಇರುವುದು, ಎಲ್ಲರೂ ಕೊಟ್ಟಿದ್ದಾರೆ ಅದನ್ನು ಜೆರಾಕ್ಸ್ ಮಾಡಿ ಕೊಡಲು ಕರೆಂಟು ಇಲ್ಲ, ಕೊಡುತೇನೆ ತಡೆಯಿರಿ ಎಂದು ಹೇಳುವರಂತೆ. ಹೀಗೆ ಕ್ಷಣ ಕ್ಷಣಕ್ಕೂ ಕುರುಡು ನೆಪ ಹೇಳುತ್ತಾ, ಜಾರಿಕೆಯ ಉತ್ತರ ನೀಡಿ ಜಾರಿ ಕೊಳ್ಳುವರಂತೆ. ಒಟ್ಟಿನಲ್ಲಿ ಸುಮಾರು ೧೦ ದಿವಸವಾದರು ಅಂಬೇಡ್ಕರ್ ಜಯಂತಿ ಆಚರಣೆ ಮಾಡಿರುವ ಯಾವುದೇ ಕಡತವನ್ನು ನೀಡುತ್ತಿಲ್ಲ. ಎರಡು ಸಲ ಪತ್ರಿಕೆಯಲ್ಲಿ ಪ್ರಕಟವಾದರೂ, ಸಂಬಂಧಪಟ್ಟ ಇಲಾಖೆಯವರು ಯಾವುದೇ ಕ್ರಮ ತೆಗೆದುಕೊಳ್ಳದೇ ಇರುವುದನ್ನು ನೋಡಿದರೆ ಇದು ಒಂದು ವಿಪರ್ಯಾಸವೆ ಸರಿ.ಈ ಭಾಗದ ಶಾಸಕರು ಮತ್ತು ಅಧಿಕಾರಿಗಳು ಏನು ಮಾಡುವರೋ ಕಾದು ನೋಡೋಣ.

**ತಾಲೂಕ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್:ಪ್ರದೀಪ್. ಕುಮಾರ್.ಸಿ. ಕೊಟ್ಟೂರು.**

## ಮಾದಿಗ ಮೀಸಲಾತಿಗೆ ಬಿಜೆಪಿ ಬೆಂಬಲಿಸಲು ರಾಷ್ಟ್ರೀಯ ಅಧ್ಯಕ್ಷ ಮಂದಕೃಷ್ಣ ಮಾದಿಗ ಕರೆ



**ಬಾಗಲಕೋಟೆ :** ರಾಷ್ಟ್ರವನ್ನು ಬಹು ವರ್ಷಗಳ ಕಾಲ ಆಳಿದ ಕಾಂಗ್ರೆಸ್ ಪಕ್ಷ ಮಾದಿಗ ಸಮುದಾಯಕ್ಕೆ ನ್ಯಾಯಯುತವಾಗಿ ನೀಡಬೇಕಾದ ಯಾವುದೇ ಸೌಲಭ್ಯ ನೀಡದ್ದಾಕ್ಕಾಗಿ ಶೋಷಿತ ದಲಿತ ಸಮುದಾಯಗಳು ತಮ್ಮ ಅಸ್ತಿತ್ವದ ಉಳುವಿಗಾಗಿ ನಿತ್ಯ ಹೋರಾಟ ಮಾಡುವ ದುಸ್ಥಿತಿ ಬಂದೋದಗಿದೆ ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಮಂದ ಕೃಷ್ಣ ಮಾದಿಗ ಇವರು ಆರೋಪಿಸಿದರು, ಚಳ್ಳಕೆರಿ ನಗರದಲ್ಲಿ ಚುನಾವಣಾ ಜಾಗೃತಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು ಮಾದಿಗ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯಗಳನ್ನು ಬಿಡಿ ಬಿಡಿಯಾಗಿ ಬಿಚ್ಚಿಟ್ಟ ಅವರು ಪ್ರಸ್ತುತ ಏ ಐ ಸಿ ಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರೆ ಮಾದಿಗ ಒಳಮಿಸಲಾತಿಗೆ ಅಡ್ಡಿಯಾಗಿದ್ದಾರೆ ಇತ್ತೀಚೆಗೆ ಹೈದ್ರಾಬಾದನಲ್ಲಿ ನಡೆದ ಮಾದಿಗ ಮೀಸಲಾತಿ ಸಮೀತಿ ಸಭೆಗೆ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಆಗಮಿಸಿ ನಮ್ಮ ಹೋರಾಟಕ್ಕೆ ಪ್ರಶಂಸೆ ವ್ಯಕ್ತಪಡಿಸಿದಾರಲ್ಲದೆ ಲೋಕಸಭಾ ಚುನಾವಣೆ ನಂತರ ಮಾದಿಗ ಮೀಸಲಾತಿ ಜಾರಿಗೆ ತರುವ ಜೊತೆಗೆ ಸಮುದಾಯದ ಸರ್ವತೋಮುಖ ಕಾರ್ಯಗಳಿಗೂ ನಾವಿದ್ದೇವೆ ಎಂದು ಭರವಸೆ ನೀಡಿದ್ದಾರೆ. ಬಹುಶಃ ದೇಶದ ಇತಿಹಾಸದಲ್ಲಿ ಪ್ರಧಾನ ಮಂತ್ರಿಗಳು ಹೋರಾಟದ ಕಾರ್ಯಕ್ರಮಕ್ಕೆ ಆಗಮಿಸಿ ರೂಪು ರೇಷೆಗಳನ್ನು ವಿಚಾರಿಸಿ ನಮ್ಮ ಸಮುದಾಯದ ಬಗ್ಗೆ ಆಡಳಿತ ವೈಖರಿಯಲ್ಲಿ ಮೀಸಲಾತಿ ಭರವಸೆಯನ್ನು ಮುಕ್ತ ಕಂಠದಿಂದ ಮಾತನಾಡಿದ್ದು ನಮ್ಮ ಹೋರಾಟಕ್ಕೆ ಹೆಮ್ಮೆಯ ಇತಿಹಾಸ ವಿಷಯ ನನ್ನ ಸಮುದಾಯ ಮೋದಿಯವರನ್ನು ಬೆಂಬಲಿಸಿ ಮೀಸಲಾತಿ ಪಡೆಯೋಣ ಎಂದರು.

**ರಾಜ್ಯ ವಿಶೇಷ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ವಾಯ್.ಸಿ. ಶಿರೂರು.**

## ಅಂಚೆ ಪತ್ರಗಳ ಮೇಲೆ 'ಚುನಾವಣ ಪರ್ವ ದೇಶದ ಗರ್ವ' ಮುದ್ರೆ ಪ್ರತಿಯೊಬ್ಬರೂ ಚುನಾವಣಾ ಹಬ್ಬದಲ್ಲಿ ಪಾಲ್ಗೊಳ್ಳಿ: ಡಿಸಿ ಜಾನಕಿ



### ಅಂಚೆ ಇಲಾಖೆ ಪತ್ರ ರವಾನೆಯಲ್ಲಿ ಮತದಾನ ಜಾಗೃತಿ

**ಕಾರ್ಯಕ್ರಮ ಪೂರ್ವದಲ್ಲಿ ಬಾಗಲಕೋಟೆ ಅಂಚೆ ಇಲಾಖೆಯಲ್ಲಿ ಸ್ವೀಕರಿಸುವ ಹಾಗೂ ರವಾನಿಸುವ ಪ್ರತಿಯೊಂದು ಪತ್ರಗಳ ಮೇಲೆ ಚುನಾವಣಾ ಪರ್ವ ದೇಶದ ಗರ್ವ ಎಂಬ ಘೋಷವಾಕ್ಯೆಯ ಶೀಲ್ ಹಾಕಿ ಮತದಾನ ಜಾಗೃತಿ ಮೂಡಿಸುವ ಕಾರ್ಯಕ್ಕೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹಾಗೂ ಜಿ.ಪಂ ಸಿಇಓ ಶಶಿಧರ ಕುರೇರ ಜಂಟಿಯಾಗಿ ಚಾಲನೆ ನೀಡಿದರು.**

**ಬಾಗಲಕೋಟೆ :** ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಮತದಾನದ ಹಕ್ಕು ನೀಡಿದ್ದು, ಪ್ರತಿಯೊಬ್ಬರೂ ಚುನಾವಣಾ ಹಬ್ಬದಲ್ಲಿ ಪಾಲ್ಗೊಳ್ಳಬೇಕೆಂದು ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಅಂಚೆ ಇಲಾಖೆ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಮತದಾನ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಮತ, ನಮ್ಮ ಹಕ್ಕು ಪ್ರತಿಯೊಬ್ಬರು ಈ ಚುನಾವಣಾ ಹಬ್ಬದಲ್ಲಿ ಪಾಲ್ಗೊಂಡು ತನ್ನ ಕರ್ತವ್ಯವನ್ನು ನಿಭಾಯಿಸಬೇಕು. ಪ್ರತಿಶತ ನೂರರಷ್ಟು ಮತದಾನ ಆಗಬೇಕು. ನಿಮ್ಮ ಮೂಲಕ ತಪ್ಪದೇ ಮತದಾನದ ಹಕ್ಕನ್ನು ಚಲಾಯಿಸುವಂತೆ ಮಾಡಬೇಕೆಂದರು.

ಬರುವ ಮೇ 7 ರಂದು ನಡೆಯುವ ಮತದಾನ ಪ್ರಕ್ರಿಯೆಯಲ್ಲಿ ಕುಟುಂಬ ಸಮೇತರಾಗಿ ಮತಗಟ್ಟೆಗೆ ಆಗಮಿಸಿ ಮತದಾನ ಮಾಡಬೇಕು. ನಗರ ಪ್ರದೇಶದಲ್ಲಿ ಮತದಾನ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಹಲವು ಬಗೆಯ ವಿಶೇಷ ಸ್ವೀಪ್ ಕಾರ್ಯ ಚಟುವಟಿಕೆಗಳನ್ನು ಆಯೋಜನೆ ಮಾಡಿ ಜಾಗೃತಿ ಮೂಡಿಸಲಾಗುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ಮತದಾನವಾಗಬೇಕೆಂಬ ಉದ್ದೇಶದೊಂದಿಗೆ ಸ್ವೀಪ್ ಕಾರ್ಯ ಚಟುವಟಿಕೆ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಸ್ವೀಪ್ ಸಮಿತಿ ಮೂಲಕ ಗ್ರಾಮ ಹಾಗೂ ನಗರ ಪ್ರದೇಶದಲ್ಲಿ ಮತದಾನ ಜಾಗೃತಿ ಅಭಿಯಾನ ಕೈಗೊಳ್ಳಲಾಗುತ್ತಿದೆ. ನಮ್ಮದು ಪ್ರಜಾಪ್ರಭುತ್ವ ದೇಶ, ನಮ್ಮ ಹಕ್ಕನ್ನು ಚಲಾಯಿಸುವುದು ನಮ್ಮ ಜವಾಬ್ದಾರಿ. ಪ್ರತಿಯೊಬ್ಬರೂ ಮತ ಚಲಾಯಿಸಬೇಕು ಎಂದರು.

ಜಿಲ್ಲಾ ಅಂಚೆ ಅಧಿಕ್ಷಕರಾದ ಎಚ್.ಬಿ.ಹಸಬಿ ಮಾತನಾಡಿ, ಜಿಲ್ಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಳಕ್ಕಾಗಿ ಮತದಾನ ಜಾಗೃತಿ ಅಭಿಯಾನದಲ್ಲಿ ಅಂಚೆ ಇಲಾಖೆಯು ಜಿಲ್ಲಾಡಳಿತದೊಂದಿಗೆ ಕೈಜೋಡಿಸಿದೆ. ಅಂಚೆ ಕಚೇರಿಯಲ್ಲಿ ಸ್ವೀಕರಿಸುವ ಹಾಗೂ ರವಾನಿಸುವ ಪತ್ರಗಳ ಮುಖಾಂತರ ಮತದಾನ ಮಾಡುವ ಕುರಿತಾಗಿ ಮತದಾರರಲ್ಲಿ ವ್ಯಾಪಕವಾಗಿ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಈ ಸಂದರ್ಭದಲ್ಲಿ ಸ್ವೀಪ್ ಸಮಿತಿ ಅಧ್ಯಕ್ಷರಾದ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶಶಿಧರ ಕುರೇರ ಮತದಾನ ಪ್ರತಿಜ್ಞಾವಿಧಿ ಬೊಧಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತಿಯ ಯೋಜನಾ ನಿರ್ದೇಶಕ ಶಿಶಕಾಂತ ಶಿವಪುರೆ, ಮುಖ್ಯ ಲೆಕ್ಕಾಧಿಕಾರಿ ಸಿದ್ದರೇಮೇಶ್ವರ ಉಕ್ಕಲಿ, ಬಾಗಲಕೋಟೆ ಸಹಾಯಕ ಅಂಚೆ ಅಧಿಕ್ಷಕರಾದ ಸಿ.ಜಿ.ಕಾಂಬ್ಳೆ, ಎಂ.ಎ.ಬಗವಾನ, ಪೋಸ್ಟ ಮಾಸ್ಟರ್ ಎಸ್.ಎಂ.ಜೋಶಿ, ಎನ್.ಆರ್. ಮೋರೆ ಸೇರಿದಂತೆ ಜಿಲ್ಲಾ ಪಂಚಾಯತಿಯ ಹಾಗೂ ಅಂಚೆ ಇಲಾಖೆಯ ಅಧಿಕಾರಿ, ಸಿಬ್ಬಂದಿ ಉಪಸ್ಥಿರಿದ್ದರು. ಮತದಾನ ಜಾಗೃತಿ ಅಭಿಯಾನವು ಅಂಚೆ ಕಚೇರಿ ಮೂಲಕ ಬಸವೇಶ್ವರ ವೃತ್ತದಿಂದ ಸಾಗಿ ನಾನಾ ಕಡೆಗಳಲ್ಲಿ ಸಂಚರಿಸಿತು.

## ಬಾರಿ ಮಳೆಗೆ ನಾಲವತ್ತು ಟನ ಪಪ್ಪಾಯಿ ಬೆಳೆ ನಾಶ ರೈತ ಶಿವಣ್ಣ ಕಂಗಾಲು



**ಬೆಣ್ಣಿಕಲ್ಲು :** ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣ್ಣಿಕಲ್ಲು ಗ್ರಾಮ ಪಂಚಾಯತಿಯ ಬೆಣ್ಣಿಕಲ್ಲು ಗ್ರಾಮದಲ್ಲಿ ಸೋಮವಾರ ರಂದು ಸುಮಾರು 4.50 ರ ಸಮಯದಲ್ಲಿ ಭಾರಿ ಗಾಳಿ ಹಾಗೂ ಮಳೆಗೆ ಬೆಣ್ಣಿಕಲ್ಲು ಗ್ರಾಮದ ರೈತ ಮಲ್ಲಾಪುರದ ಶಿವಣ್ಣ ಈ ರೈತ ತನ್ನ ಜಮೀನು ಸರ್ವೆ ನಂಬರ್ 92 ಮತ್ತು 93ಹೊಲದಲ್ಲಿ ಸರಿ ಸುಮಾರು ಎರಡು ಸರ್ವೆ ನಂಬರಿನ ಒಟ್ಟು ಜಮೀನು 5 ಎಕ್ಕರೆ 80 ಸೆಂಟ್ಸ್ ನಲ್ಲಿ 4000 ಕ್ಕೂ ಹೆಚ್ಚು ಪಪ್ಪಾಯಿ ಗಿಡಗಳನ್ನು ನಾಟಿ ಮಾಡಿದ್ದು ಈ ಫಲಕ್ಕೆ ಖರ್ಚನ್ನು ಕನಿಷ್ಠ 10 ಲಕ್ಷಕ್ಕೂ ಹೆಚ್ಚು ಸಾಲ ಸೂಲ ಮಾಡಿ ಬಂಡವಾಳ ಬೆಳೆಯ ಮೇಲೆ ಹಾಕಿ ಪಸಲು ಕೈಗೆ ಸಿಗುವ ಸಂದರ್ಭದಲ್ಲಿ ಸೋಮವಾರ ರಂದು ಭಾರಿ ಗಾಳಿ ಮಳೆಗೆ ಸರಿ ಸುಮಾರು ಏಳು ನೂರು ಗಿಡಗಳು ನಾಶವಾಗಿವೆ ಹಾಗೂ 40 ಟನ್ ಪಪಾಯಿ ಕಾಯಿ ನೆಲ್ಕೂರುಳಿವೆ, ಹಾಗೂ ಕಟ್ಟಾವ್ ಗೆ ಬಂದ ಫಲವು ಮಳೆಯ ರಬಸಕ್ಕೆ ಪಪಾಯಿ ಕಾಯಿಯ ಮೇಲೆ ಬಿದ್ದ ಮಳೆ ರಬಸಕ್ಕೆ ಸಂಪೂರ್ಣವಾಗಿ ಫಲ ಬಂದ ಕಾಯಿಯಿಂದ ಹಾಲು ಸೋರಿ ಕಾಯಿ ಮಾರಾಟಕ್ಕೂ ಬರದೇ ಸಂಪೂರ್ಣ ನಷ್ಟ ಹೊಂದಿರುವೇ ಎಂದು ರೈತ ಶಿವಣ್ಣ ತಮ್ಮ ಅಳಲನ್ನು ನಮ್ಮ ವಾಹಿನಿಗೆ ಹಂಚಿ ಕೊಂಡಿದ್ದಾನೆ, ಈ ರೈತನ ಗೋಳನ್ನು ಮಾನ್ಯ ಜಿಲ್ಲಾಧಿಕಾರಿಗಳು ವಿಜಯನಗರ, ಹಾಗೂ ಹಗರಿಬೊಮ್ಮನಹಳ್ಳಿ ತಾಲೂಕಾ ದಂಡಾಧಿಕಾರಿಗಳು,ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು,ಮತ್ತು ಮಾನ್ಯ ಶಾಸಕರಾದ ನೇಮರಾಜ್ ನಾಯ್ಕ್ ರವರು ಇವರ ಪ್ರಕೃತಿಯ ವಿಕೋಪದ ಅಡಿಯಲ್ಲಿ ಗಾಳಿ ಮಳೆಗೆ ಹಾನಿಯಾಗಿರುವಂತಹ ಬೆಳೆ ನಷ್ಟ ಸರ್ಕಾರವು ಬರಿಸಲಿ ಎಂದು ರೈತ ಶಿವಣ್ಣ ಗೋಳುಗೆ ಸರ್ಕಾರವು ತಾನು ಹಾಕಿದಂತ ಬಂಡವಾಳವಾದರು ಸಿಗಲಿ ಎನ್ನುವುದು ನಮ್ಮ ವಾಹಿನಿಯ ಉದ್ದೇಶವಾಗಿದೆ

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ.ಬಿ.ಸಾಲುಮನೆ. ಕೂಡ್ಲಿಗಿ**

## ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ವಸತಿ ನಿಲಯ ವಿದ್ಯಾರ್ಥಿಗಳನ್ನು ಸನ್ಮಾನಿಸಿದ ಸಿಇಓ ಕುರೇರ



**ಬಾಗಲಕೋಟೆ :** ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮೆಟ್ರಿಕ್ ನಂತರದ ವಸತಿ ನಿಲಯಗಳ ಪೈಕಿ ಉತ್ತಮ ಅಂಕ ಪಡೆದು ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಜಿ.ಪಂ ಸಿಇಓ ಶಶಿಧರ ಕುರೇರ್ ಸನ್ಮಾನಿಸಿ, ಅಭಿನಂದನೆ ಸಲ್ಲಿಸಿದರು.

ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಪೈಕಿ ವಿಜ್ಞಾನ ವಿಭಾಗದಲ್ಲಿ ಪ್ರವೀಣ ಕೋಲಕಾರ ಶೇ.98.33 ರಷ್ಟು ಅಂಕ ಪಡೆಯುವ ಮೂಲಕ ಪ್ರಥಮ ಸ್ಥಾನ ಪಡೆದರೆ, ಮಹೇಶ ಲಮಾಣಿ ಮತ್ತು ವಿಜಯ ಮಹಾಂತೇಶ ಮದ್ದಾನಿಮಠ ಶೇ.97.83 ರಷ್ಟು ಅಂಕ ಪಡೆದು ದ್ವಿತೀಯ ಸ್ಥಾನ ಪಡೆದುಕೊಂಡಿದ್ದಾರೆ. ಕಲಾವಿಭಾಗದಲ್ಲಿ ಐಶ್ವರ್ಯ ಕೌಜಲಗಿ ಶೇ.97.66 ರಷ್ಟು ಅಂಕ ಪಡೆಯುವ ಮೂಲಕ ತೃತೀಯ ಸ್ಥಾನ ಪಡೆದುಕೊಂಡು ಉತ್ತಮ ಸಾಧನೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಜಿ.ಪಂ ಸಿಇಓ ಶಶಿಧರ ಕುರೇರ ಅವರು ವಸತಿ ನಿಲಯದಲ್ಲಿ ಇದ್ದುಕೊಂಡು ಹೆಚ್ಚಿನ ಅಂಕ ಪಡೆದಿರುವುದು ಅತ್ಯುತ್ತಮ ಸಾಧನೆಯಾಗಿದ್ದು, ಮುಂದಿನ ಜೀವನದಲ್ಲಿ ಇನ್ನು ಹೆಚ್ಚಿನ ಯಶಸ್ಸು ಕಾಣಲೆಂದು ಹಾರೈಸಿದರು. ಅಲ್ಲದೇ ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಯಲ್ಲಿ ವಸತಿ ನಿಲಯಗಳ ಒಟ್ಟು ಫಲಿತಾಂಶ ಶೇ.92.87 ರಷ್ಟು ಆಗಿರುವದನ್ನು ತಿಳಿದು ಸಂತಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಹರ್ಷ ಎಸ್, ಪತ್ರಾಂಕಿತ ವ್ಯವಸ್ಥಾಪಕ ಶಿವು ದರಗಾದ, ನಿಲಯ ಮೇಲ್ವಿಚಾರಕರಾದ ಆನಂದಕುಮಾರ ಪಾಟೀಲ, ಯಮನವ್ವ ಚಕ್ಕಪ್ಪನವರ, ಅಕ್ಕಾತಾಯಿ ರಬಕವಿ ಸೇರಿದಂತೆ ವಿದ್ಯಾರ್ಥಿಗಳ ಪಾಲಕ ಪೋಷಕರು ಇದ್ದರು.

# ನರೇಗಾ ಕಾರ್ಮಿಕರಿಗೆ ಮತದಾನ ಜಾಗೃತಿ ಮೂಡಿಸಿದ ಜಿ.ಪಂ. ಸಿಇಓ ರಿಷಿ ಆನಂದ

**ವಿಜಯಪುರ :** ಸಾರ್ವತ್ರಿಕ ಲೋಕಸಭಾ ಚುನಾವಣೆ ಇದೇ ಮೇ 07ರಂದು ಜರುಗಲಿದ್ದು, ಮತದಾನದ ದಿನದಂದು ಕಡ್ಡಾಯವಾಗಿ ಮತಗಟ್ಟೆಗಳಿಗೆ ಬಂದು ಎಲ್ಲರೂ ಮತದಾನ ಮಾಡಿ, ಮತದಾನವನ್ನು ನಿಮಗಾಗಿ, ನಿಮ್ಮ ಭವಿಷ್ಯಕ್ಕಾಗಿ, ನಮ್ಮ ಸಮಾಜಕ್ಕಾಗಿ ಮತ್ತು ನಮ್ಮ ದೇಶಕ್ಕಾಗಿ ಮತದಾನ ಮಾಡಿ ಚುನಾವಣೆ ಪ್ರಕ್ರಿಯೆಯನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ರಿಶಿ ಆನಂದ ಹೇಳಿದರು.

ಅವರು ವಿಜಯಪುರ ತಾಲೂಕಿನ ನಾಗಠಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಕೆರೆಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ನರೇಗಾ ಕಾರ್ಮಿಕರಿಗೆ ಮತದಾನ ಜಾಗೃತಿ ಮೂಡಿಸಿದರು.

ಪ್ರಸ್ತುತ ಜಿಲ್ಲೆಯಲ್ಲಿ ಬರಗಾಲ ಇರುವುದರಿಂದ ನರೇಗಾ ಯೋಜನೆಯಡಿ ಈ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳುಗಳಲ್ಲಿ ಕೂಲಿ ಆಧಾರಿತ ಕಾಮಗಾರಿಗಳನ್ನು ಮಾತ್ರ ಕೈಗೊಳ್ಳಲಾಗುತ್ತಿದೆ. ಆದ್ದ-ರಿಂದ ಎಲ್ಲರೂ ಇನ್ನೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕೂಲಿ ಕಾರ್ಮಿಕರು ಕೆಲಸಕ್ಕೆ ಬರಬೇಕು. ನರೇಗಾ ಯೋಜನೆಯಡಿ ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನವಾದ ಕೂಲಿ ಒದಗಿಸಲಾಗುತ್ತಿದೆ ಪ್ರತಿದಿನ ಒಬ್ಬರಿಗೆ 349 ರೂಪಾಯಿಗಳನ್ನು ನೀಡಲಾಗುತ್ತಿದೆ ಎಂದರು.





ಜನರಿಗೆ ನರೇಗಾ ಯೋಜನೆಯಡಿ ಉದ್ಯೋಗ ಒದಗಿಸಲು ತಾಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಎಲ್ಲಾ ಅಧಿಕಾರಿಗಳಿಗೆ ಈಗಾಗಲೇ ನಿರ್ದೇಶನ ನೀಡಲಾಗಿರುತ್ತದೆ. ಆದ್ದರಿಂದ ತಾವೆಲ್ಲರೂ ಇನ್ನೂ ಹೆಚ್ಚು ಹೆಚ್ಚು ಉದ್ಯೋಗ ಮಾಡಿ ಯೋಜನೆಯ ಸೌಲಭ್ಯ ಪಡೆದುಕೊಳ್ಳಬೇಕು ಮತ್ತು ಅಭಿವೃದ್ಧಿ ಹೊಂದಬೇಕು. ಕಾಮಗಾರಿ ಸ್ಥಳದಲ್ಲಿ ತಮ್ಮೆಲ್ಲರಿಗೂ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತದೆ ಹಾಗೂ ಮೂಲಭೂತ ಸೌಕರ್ಯಗಳಾದ ನೆರಳಿನ ವ್ಯವಸ್ಥೆ, ಕುಡಿಯುವ ನೀರು ಮತ್ತು ಉಚಿತ ಆರೋಗ್ಯ ತಪಾಸಣೆ ವ್ಯವಸ್ಥೆಗಳನ್ನು ಮಾಡಲಾಗಿದೆ. ಪ್ರಸ್ತುತ ದಿನಗಳಲ್ಲಿ ಬಿಸಿಲಿನ ತಾಪಮಾನ ಅತೀ ಹೆಚ್ಚು ಇರುವುದರಿಂದ ತಮ್ಮೆಲ್ಲರಿಗೂ ಆರೋಗ್ಯದಲ್ಲಿ ಏರುಪೇರು ಉಂಟಾಗದಂತೆ ಎಚ್ಚರವಹಿಸಿ, ಕಾಮಗಾರಿ ಸ್ಥಳದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಪ್ರತಿಯೊಬ್ಬರೂ ಕಡ್ಡಾಯವಾಗಿ ನಿಮ್ಮ ನಿಮ್ಮ ಆರೋಗ್ಯವನ್ನು ತಪಾಸಣೆ ಮಾಡಿಸಿಕೊಳ್ಳಿ ಆರೋಗ್ಯದಲ್ಲಿ ಸಮಸ್ಯೆಗಳಿದ್ದರೆ ಹೆಚ್ಚಿನ ಚಿಕಿತ್ಸೆಯ ಅವಶ್ಯವಿದ್ದಲ್ಲಿ ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಶಿಫಾರಸ್ಸು ಮಾಡಲಾಗುವುದು ಆದ್ದರಿಂದ ನೀವೆಲ್ಲರೂ ಇದರ ಸದುಪಯೋಗವನ್ನು ಪಡೆದು ಆರೋಗ್ಯವಂತರಾಗಿರಬೇಕು ಎಂದು ಹೇಳಿದರು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೆಲಸ ನಿರ್ವಹಿಸುವ ಕೂಲಿ ಕಾರ್ಮಿಕರ ಮೂರು ವರ್ಷದ ಒಳಗಿನ ಮಕ್ಕಳನ್ನು ಆರೈಕೆ ಮಾಡಲು ಜಿಲ್ಲೆಯಲ್ಲಿ 163 ಕೂಸಿನ ಮನೆಗಳನ್ನು ಪ್ರಾರಂಭ ಮಾಡಲಾಗಿದೆ. ಅದೇ ರೀತಿ ನಾಗಠಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಸಹ ಕೂಸಿನ ಮನೆಯನ್ನು ಪ್ರಾರಂಭಿಸಲಾಗಿದೆ. ಎಲ್ಲರೂ ನಿಮ್ಮ ಮೂರು ವರ್ಷದ ಒಳಗಿನ ಮಕ್ಕಳನ್ನು ಕೂಸಿನ ಮನೆಯಲ್ಲಿ ಬಿಟ್ಟು ಕೆಲಸಕ್ಕೆ ಬರಬಹುದು. ಸದರಿ ಕೂಸಿನ ಮನೆಯಲ್ಲಿ ನಿಮ್ಮ ಮಕ್ಕಳನ್ನು ನೋಡಿಕೊಳ್ಳಲು ಮತ್ತು ಆರೈಕೆ ಮಾಡಲು ಪ್ರತ್ಯೇಕವಾಗಿ ಮಕ್ಕಳ ಆರೈಕೆದಾರರನ್ನು ಆಯ್ಕೆ ಮಾಡಲಾಗಿದೆ. ಅಲ್ಲಿ ಮಕ್ಕಳ ಆರೈಕೆದಾರರು ಮಕ್ಕಳಿಗೆ ಆಟ–ಪಾಠ, ಪಾಲನೆ–ಪೋಷಣೆ, ವೈಯಕ್ತಿಕ ಸ್ವಚ್ಛತೆ ಕಡೆಗೆ ವಿಶೇಷಗಮನ ನೀಡುತ್ತಾರೆ. ನೀವು ನಿರ್ಭೀತಿಯಿಂದ ನಿಮ್ಮ ಮಕ್ಕಳನ್ನು ಕೂಸಿನ ಮನೆಗಳಲ್ಲಿ ಬಿಟ್ಟು ನೆಮ್ಮದಿಯಿಂದ ಕೆಲಸ ಮಾಡಬಹುದು ಎಂದು ತಿಳಿಸಿದರು.

ನಂತರ ಜಿಲ್ಲಾ ಸ್ವೀಪ್ ಸಮಿತಿಯ ರಾಯಭಾರಿ ಸಾಕ್ಷಿ ಹಿರೇಮಠ ರವರು ಮತದಾನ ಜಾಗೃತಿ ಗೀತೆಯನ್ನು ಹಾಡಿದರು. ಜಿ.ಪಂ ಎನ್.ಆರ್.ಎಲ್.ಎಮ್ ವ್ಯವಸ್ಥಾಪಕರಾದ ಅಮೋಘಸಿದ್ಧ ಗೌಳಿಯವರು ಮತದಾರರ ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳದಲ್ಲಿ 282 ಮಹಿಳೆಯರು, 133 ಪುರುಷರು, ಒಟ್ಟು 415 ಕೂಲಿ ಕಾರ್ಮಿಕರು ಸ್ಥಳದಲ್ಲಿದ್ದರು. ಇದೇ ವೇಳೆ ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಗಳಾದ ಬಿ. ಎಸ್. ಮೂಗನೂರಮಠ, ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿಗಳಾದ ಸಿ. ಆರ್. ಮುಂಡರಗಿ, ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ. ಹೊಂಗಯ್ಯ, ತಾ.ಪಂ. ಸಹಾಯಕ ನಿರ್ದೇಶಕರು(ಗ್ರಾ.ಉ) ಕಾಸಿಮಸಾಬ ಮಸಳಿ, ಜಿಲ್ಲಾ ಸ್ವೀಪ್ ಸಮಿತಿಯ ರಾಯಭಾರಿ ಸಹನಾ ಕುಡಿಗನೂರ, ನಾಗಠಾಣ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಿ. ಆರ್. ರಾಠೋಡ, ತಾಂತ್ರಿಕ ಸಂಯೋಜಕರು, ಗ್ರಾಮಸ್ಥರು ಉಪಸ್ಥಿತರಿದ್ದರು.

# ಕವೀಂದ್ರ ತೀರ್ಥರ ಪೂರ್ವಾರಾಧನೆ ಸಂಪನ್ನ

## ನವವೃಂದಾವನಗಡ್ಡೆ: ಸತ್ಯಾತ್ಮತೀರ್ಥ ಶ್ರೀಗಳಿಂದ ಪೂಜಾ ಕೈಂಕರ್ಯ

**ಗಂಗಾವತಿ :** ತಾಲ್ಲೂಕಿನ ಆನೆಗೊಂದಿ ಗ್ರಾಮ ಸಮೀಪದ ನವವೃಂದಾವನ ಗಡ್ಡೆಯಲ್ಲಿ ಮಂಗಳವಾರ ಉತ್ತರಾದಿ ಮಠ ಪೀಠಾಧಿಪತಿ ಶ್ರೀಸತ್ಯಾತ್ಮತೀರ್ಥ ಶ್ರೀಗಳ ನೇತೃತ್ವದಲ್ಲಿ ಕವೀಂದ್ರತೀರ್ಥರ ಪೂರ್ವಾರಾಧನೆ ಶ್ರದ್ಧಾ, ಭಕ್ತಿಯಿಂದ ಜರುಗಿತು.

ಬೆಳಿಗ್ಗೆ ಕವೀಂದ್ರ ತೀರ್ಥರ ಮೂಲವೃಂದಾವನದಲ್ಲಿ ಪ್ರಾತಃ ಪ್ರಾರ್ಥನೆ, ದಂಡೋದಕ, ಪಾದೋದಿಕ ಸ್ನಾನ, ಶ್ರೀಮನ್ ನ್ಯಾಯಸುಧಾ ಪಾಠ, ಭಕ್ತರಿಗೆ ಮುದ್ರಾಧಾರಣೆ, ಜ್ಞಾನಸತ್ರ, ಉತ್ತರಾದಿಮಠದ ಸಂಸ್ಥಾನ ಪೂಜೆ, ಮೂಲರಾಮಾದಿ 28 ಪ್ರತಿಮೆಗಳ ಸಂಸ್ಥಾನ ಪೂಜೆ, ವಿದ್ಯಾರ್ಥಿಗಳ ಅನುವಾದ, ಪಂಡಿತರಿಂದ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಹಾಗೇ ಕವೀಂದ್ರತೀರ್ಥರ ಮೂಲ ವೃಂದಾವನಕ್ಕೆ ಪಂಚಾಮೃತಾಭಿಷೇಕ, ಹಸ್ತೋದಕ, ಮಹಾಮಂಗಳಾರತಿ, ತೀರ್ಥ ಪ್ರಸಾದ ಸೇರಿದಂತೆ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು.

ಸಂಜೆ ಸತ್ಯಾತ್ಮತೀರ್ಥರಿಂದ ಭಕ್ತರಿಗೆ ಅನುಗ್ರಹ ಸಂದೇಶ, ವಿದ್ಯಾರ್ಥಿಗಳ ಅನುವಾದ, ವೇದಾಂತ ಗ್ರಂಥಗಳ ಪಾಠ, ಸ್ವಸ್ತಿವಾಚನ ಕಾರ್ಯಕ್ರಮ ಜರುಗಿದವು. ನಂತರ ಉತ್ತರಾದಿ ಮಠದ ಪರಂಪರೆಯ ಪೂರ್ವಯತಿಗಳಾದ ಸತ್ಯಧ್ಯಾನತೀರ್ಥ ಶ್ರೀಪಾದಂಗಳವರ ಮಧ್ಯಾರಾಧನಾ ದೀಪೋತ್ಸವ ಕಾರ್ಯಕ್ರಮ ಮಹೋತ್ಸವ ನಿಮಿತ್ತ ವಿಶೇಷ ಉಪನ್ಯಾಸ, ಪ್ರವಚನ, ನಡೆಯಿತು. ಪಂಡಿತ ವಿದ್ಯಾದೀಶಾಚಾರ್ಯ ಗುತ್ತಲ್, ಶಶಿ ಆಚಾರ್ಯ, ರಾಮಾಚಾರ್ಯ ಉಮರ್ಜಿ, ಆನಂದಾಚಾರ್ಯ ಜೋಶಿ ಅಕ್ಕಲಕೋಟೆ, ನಾರಾಯಣ–ಾಚಾರ್ಯ ಜೋಶಿ, ಶ್ರೀಕಾಂತಾಚಾರ್ಯ ಮುಕ್ಕುಂದಿ, ಆನಂದ ತೀರ್ಥಾಚಾರ್ ಹುಲಿಗಿ, ನಾರಾಯಣಾಚಾರ್ಯ ಹುಲಿಗಿ, ಪ್ರಸನ್ನಾಚಾರ್ಯ ಕಟ್ಟಿ, ರಾಘವೇಂದ್ರಾಚಾರ್ಯ, ಅಡವಿರಾವ್ ಕಲಾಲ ಬಂಡಿ, ಶ್ಯಾಮಾಚಾರ್ ಜೋಶಿ, ಉಪೇಂದ್ರಾಚಾರ್ ಕೇಸಕ್ಕಿ, ಕೃಷ್ಣಾಚಾರ್, ಸತ್ಯಬೋಧಾಚಾರ್, ಜಯಸಿಂಹಾಚಾರ್ ಸೇರಿದಂತೆ ಕೊಪ್ಪಳ, ಬಳ್ಳಾರಿ, ರಾಯಚೂರು, ಬೆಂಗಳೂರು ಭಾಗದ ಭಕ್ತರು ಭಾಗವಹಿಸಿದ್ದರು.



# ಹುಲಿಗೆಮ್ಮ ದೇವಸ್ಥಾನ ಅಭಿವೃದ್ಧಿಗೆ ವಿಶೇಷ ಅನುದಾನ ತರುವೆ: ಡಾ. ಬಸವರಾಜ



**ಕೊಪ್ಪಳ :** ಕಲ್ಯಾಣ ಕರ್ನಾಟಕ ಭಾಗದ ಶಕ್ತಿ ದೇವತೆ ಹಾಗೂ ಸುಪ್ರಸಿದ್ಧ ಧಾರ್ಮಿಕ ಸ್ಥಳವಾದ ಹುಲಿಗಿಯ ಹುಲಿಗೆಮ್ಮದೇವಿ ಸನ್ನಿಧಾನಕ್ಕೆ ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೆರಳಿ ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕರ್ನಾಟಕವಷ್ಟೇ ಅಲ್ಲದೇ ನೆರೆರಾಜ್ಯಗಳಿಂದ ಭಕ್ತರು ಹುಲಿಗೆಮ್ಮದೇವಿಯ ದರ್ಶನಕ್ಕೆ ಆಗಮಿಸುತ್ತಾರೆ. ಭಕ್ತರ ಸಂಖ್ಯೆಗೆ ಅನುಗುಣವಾಗಿ ಮೂಲಸೌಕರ್ಯ ಅಭಿವೃದ್ಧಿ ಮಾಡುವ ಸಂಕಲ್ಪ ಮಾಡಿದ್ದೇನೆ. ಹುಲಿಗೆಮ್ಮದೇವಿಯ ಆಶೀರ್ವಾದ, ಜನರ ಸಹಕಾರ ಅಗತ್ಯ ಎಂದರು. ಶ್ರೀಕ್ಷೇತ್ರವು ರಾಜ್ಯ ಸರ್ಕಾರಕ್ಕೆ ನೂರಾರು ಕೋಟಿ ರೂ. ಆದಾಯ ತರುತ್ತಿದೆ. ಆದರೆ, ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗಿಲ್ಲ. ಕಳೆದ ಅಧಿವೇಶನದಲ್ಲಿ ಹುಲಿಗೆಮ್ಮ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ. ಆದರೆ, ಅಭಿವೃದ್ಧಿ ರೂಪುರೇಷೆ ಇನ್ನು ಸಿದ್ಧವಾಗಿಲ್ಲ. ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ, ಹುಲಿಗೆಮ್ಮ ದೇವಸ್ಥಾನ ಅಭಿವೃದ್ಧಿಗೆ ವಿಶೇಷ ಅನುದಾನ ತಂದು ಅಭಿವೃದ್ಧಿ ಪಡಿಸುವೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಪಕ್ಷದ ಪ್ರಮುಖರು, ಕಾರ್ಯಕರ್ತರು ಜೊತೆಗಿದ್ದರು.

# ಕೆ. ಅಣ್ಣಾ ಮಲೈ: ವರ್ಷದ ವ್ಯಕ್ತಿ!

ಪ್ರಧಾನಿ ಮೋದಿಯವರು ಯಾರನ್ನಾದರೂ ಅಪ್ಪಿಕೊಂಡದ್ದನ್ನು ನೀವು ನೋಡಿರುವಿರಾ ? ಎಂದಾದರೂ ಒಂದು ಸಲ ಇಂತಹ ದೃಶ್ಯ ಕಾಣಲು ಸಿಗುತ್ತದೆ. ಮೋದಿ ಅವರು ಇಷ್ಟೊಂದು ಸಲುಗೆಯಿಂದ ಸಾಮಾನ್ಯವಾಗಿ ಯಾರೊಂದಿಗೂ ಇರುವುದಿಲ್ಲ.

ಆದರೆ ಓರ್ವ ವ್ಯಕ್ತಿ ಇದಕ್ಕೆ ಅಪವಾದ ಎಂಬಂತೆ ಇದ್ದಾರೆ.

ಅವರ ಹೆಸರು ಕೆ. ಅಣ್ಣಾ ಮಲೈ ಅಹುದು. ಈ ಮನುಷ್ಯ ಎಷ್ಟು ಸಲ ಮೋದಿಯವರ ಎದುರಿಗೆ ಬಂದಿರುವರೊ, ಆಗಾಗ ಅವರನ್ನು ಆಲಂಗಿಸಿ ಮೋದಿಯವರು ಸ್ವಾಗತಿಸುತ್ತಾರೆ. ಇದಕ್ಕೆ ಏನು ಕಾರಣ ಇರಬಹುದು ? ಮೂಲತಃ ಈ 'ಅಣ್ಣಾ ಮಲೈ' ಯಾರು ?

ಕೆ. ಅಣ್ಣಾ ಮಲೈ. ವಯಸ್ಸು ೩೮. ಭಾರತೀಯ ಜನತಾ ಪಕ್ಷದ ತಮಿಳುನಾಡಿನ ರಾಜ್ಯಾಧ್ಯಕ್ಷ. ಆದರೆ ಇದಿಷ್ಟೇ ಅವರ ಪರಿಚಯ ಸಾಲದು. ಇಲ್ಲಿಯವರೆಗೆ ಅವರು ತಲುಪಿರುವ ಕಥೆ ತುಂಬಾ ರೋಮಾಂಚಿತವಾಗಿದೆ.



ಅಣ್ಣಾ ಮಲೈ ಅವರು ತಮಿಳುನಾಡಿನ ' ಕರೂರ ' ಎಂಬ ಅತೀ ಚಿಕ್ಕ ಗ್ರಾಮದಲ್ಲಿ ಜನಿಸಿದರು. ತಂದೆ ತಾಯಿಗಳು ಬಡ ರೈತರು. ತಮ್ಮ ಮಗನು ಕಾಲೇಜಿನವರೆಗೆ ಶಿಕ್ಷಣ ಪಡೆಯಬೇಕು ಎಂಬುದು ಅವರ ಆಸೆಯಾಗಿತ್ತು. ಅಣ್ಣಾ ಕಾಲೇಜಿನಲ್ಲಿ ಶಿಕ್ಷಣ ಪಡೆಯಲು ತೆರಳುವ ಕರೂರು ಊರಿನ ಮೊಟ್ಟ ಮೊದಲ ಹುಡುಗ ! ನಂತರ ಆತ ಕೊಯಿಮತ್ತೂರ ನಗರಕ್ಕೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ಶಿಕ್ಷಣ ಪಡೆಯಲು ತೆರಳಿದ. ತದನಂತರ ಆತನಿಗೆ ಲಖನೌದಲ್ಲಿ IIM ನಲ್ಲಿ MBA ಗಾಗಿ ಪ್ರವೇಶ ದೊರೆಯಿತು. ಲಖನೌದಲ್ಲಿನ ಹಾಗೂ ಒಟ್ಟಾರೆ ಉತ್ತರಪ್ರದೇಶದಲ್ಲಿಯ ಜನರ ದುರವಸ್ಥೆ ಕಂಡು ಆತ ಮರುಗಿದನು. ಒಮ್ಮೆ ಆತನಿಗೆ ರಸ್ತೆಯ ಬದಿಯಲ್ಲಿ ಇದ್ದ ಖೋಕಾ ಅಂಗಡಿಯವನ ಹತ್ತಿರ ಐದು ರೂಪಾಯಿಗೆ ಎಂಟು ಪೂರಿ ಭಾಜಿ ತಿನ್ನಲು ಸಿಕ್ಕಿತು. ತನಗೆ ಐದು ರೂಪಾಯಿ ಸಿಕ್ಕಿತೆಂದು ಅಂಗಡಿಯವನೂ ಕೂಡ ಖುಷಿಯಾಗಿದ್ದ. ಎಂ. ಬಿ. ಎ. ಕಲಿಯುತ್ತಿದ್ದಾಗ ಅಣ್ಣಾ ಇಡೀ ಉತ್ತರ ಪ್ರದೇಶದಲ್ಲಿ ಸುತ್ತಾಡಿದರು. ಪೂರ್ವಾಂಚಲ ಭಾಗದಲ್ಲಿ ಹಸುಳೆಗಳು ಹಸಿವಿನಿಂದ ಮರಣ ಹೊಂದುವ ಪ್ರಮಾಣ ಬಹಳವಿದ್ದಿತು. ಅದನ್ನು ನೋಡಿ ಅಣ್ಣಾ ಮಲೈ ಮನಸ್ಸು ಕಸಿವಿಸಿಗೊಳ್ಳುತ್ತಿತ್ತು. ೨೬–ನವೆಂಬರ್ ೨೦೦೮ ರಂದು ಮುಂಬೈನ ಮೇಲೆ ಭಯೋತ್ಪಾದಕರ ದಾಳಿ ನಡೆಯಿತು. ಅದನ್ನು ಕೇಳಿದ ನಂತರ ಅಣ್ಣಾ ಮಲೈ ಅವರ ಜೀವನವೇ ಬದಲಾವಣೆ ಹೊಂದಿತು. " ತಾನು ಸಮಾಜಸೇವೆಗಾಗಿ, ದೇಶ ಸೇವೆಗೆ ಈ ಖಾಸಗಿ ನೌಕರಿ ಬಿಟ್ಟು ಸರ್ಕಾರಿ ಅಧಿಕಾರಿಯಾದರೆ ಹೆಚ್ಚು ಉಪಯುಕ್ತ ಎಂದು ನಿಶ್ಚಯಿಸಿ, ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ಭಾಗವಹಿಸಲು ತೀರ್ಮಾನಿಸುತ್ತಾರೆ. ನಂತರ ಮುಖ್ಯ ಪರೀಕ್ಷೆಯಲ್ಲಿ ಐ.ಪಿ.ಎಸ್. ಪಾಸು ಮಾಡಿ ಕರ್ನಾಟಕ ಕೇಡರ್ ಪಡೆಯುತ್ತಾರೆ. ಉಡುಪಿಯಲ್ಲಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಆಗಿದ್ದಾಗ, ಅವರು ಅನೇಕ ಜಟಿಲವಾದ ಸಮಸ್ಯೆಗಳನ್ನು ಸರಾಗವಾಗಿ ಬಗೆಹರಿಸಿದರು. ಅಲ್ಲಿನ ಒಂದು ಕಾಲೇಜಿನಲ್ಲಿ ಡ್ರಗ್ ಮಾಫಿಯಾ ಆಳವಾದ ಬೇರು ಬಿಟ್ಟಿತ್ತು. ಅದರ ಬೇರುಗಳನ್ನು ಅಣ್ಣಾ ಮಲೈ ಕಿತ್ತು ಹಾಕಿದ್ದರು. ಗುಂಡಾಗಳ ವಿರುದ್ಧ ಕಠಿಣ ಕ್ರಮ ಕೈಗೊಂಡರು. ಉಡುಪಿಯ ಜನತೆ ಅವರಿಗೆ " ಸಿಂಘಮ್ ಆಫ್ ದ ಉಡುಪಿ " ಎಂಬ ಬಿರುದು ನೀಡಿ ಗೌರವಿಸಿದ್ದರು. ಆದರೆ ಮತ್ತೆ ಇಲ್ಲಿಂದ ಮತ್ತೊಂದು ಟರ್ನಿಂಗ್ ಪಾಯಿಂಟ್ ಅವರ ಜೀವನದಲ್ಲಿ ಬಂತು.

ಹತ್ತನೇ ತರಗತಿಯ ವಿದ್ಯಾರ್ಥಿನಿಯ ಮೇಲೆ ಸಾಮೂಹಿಕ ಅತ್ಯಾಚಾರವಾಯಿತು. ಅಲ್ಲದೇ ಅವಳ ಕೊಲೆಯೂ ಆಯಿತು. ಅಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಕಲ್ಲು ತೂರಾಟ ಕೂಡ ನಡೆಯಿತು. ಅಣ್ಣಾ ಮಲೈ ಅಲ್ಲಿ ಭೇಟಿ ನೀಡಿದರು. ಆ ವಿದ್ಯಾರ್ಥಿನಿಯ ಶಾಲೆಯಲ್ಲಿ ಕೇವಲ ಎರಡೇ ಎರಡು ಕಂಪ್ಯೂಟರ್ ಇದ್ದವು. ಅವುಗಳನ್ನು ಎಲ್ಲರೂ ಸರದಿಯಂತೆ ಉಪಯೋಗಿಸುತ್ತಿದ್ದರು. ಆ ದಿವಸ ಇವಳಿಗೆ ಕಂಪ್ಯೂಟರಿನಲ್ಲಿ ಕಲಿಯಲು ತಡವಾಗಿ ಅವಕಾಶ ಸಿಕ್ಕಿತು. ಶಾಲೆಯಿಂದ ಬಸ್ ನಿಲ್ದಾಣಕ್ಕೆ ಹೋಗಲು ಬಹಳ ತಡವಾಗಿತ್ತು. ಅವಳ ಹಳ್ಳಿಗೆ ಹೋಗುವ ಕೊನೆಯ ಬಸ್ಸು ಸಂಜೆ ಆರೂ ಮೂವತ್ತಕ್ಕೆ ಹೊರಟು ಹೋಗಿತ್ತು. ಇದೀಗ ಅವಳಿಗೆ ತನ್ನ ಊರಿಗೆ ಹೋಗಲು ಕಾಲ್ನಡಿಗೆ ಒಂದೇ ದಾರಿ ಆಗಿತ್ತು. ಅವಳು ನಡೆಯುತ್ತಾ ತನ್ನ





ಊರಿಗೆ ಹೊರಟಳು. ಅರಣ್ಯದಲ್ಲಿ ಸಾಗುವ ದಾರಿಯಾಗಿತ್ತು. ಅಂಥ ಸಂದರ್ಭದಲ್ಲಿ ಅವಳ ಮೇಲೆ ದಾರಿಯಲ್ಲಿ ನರಾಧಮರು ಅತ್ಯಾಚಾರ ಎಸಗಿ ಅವಳ ಪ್ರಾಣವನ್ನೂ ತೆಗೆದಿದ್ದರು.

ತಾನು ಪೋಲೀಸ್ ನೌಕರಿಯಲ್ಲಿ ಇದ್ದೂ ಕೂಡ, ಕಂಪ್ಯೂಟರ್ ಕೊರತೆ, ಬಸ್ಸುಗಳ ಅಭಾವ ನೀಗಿಸಲು ಸಾಧ್ಯವಾಗಲಿಲ್ಲವಲ್ಲ ಎಂದು ಅವರಿಗೆ ಅರಿವು ಮೂಡಿತ್ತು.

ಇದೇ ವೇಳೆ ಅವರಿಗೆ 'ಸರ್ಕಾರದ ಲೈಝನ್ ಆಫೀಸರ್ ' ಎಂದು ಅವರನ್ನು ಕೈಲಾಸ ಮಾನಸ ಸರೋವರ ಯಾತ್ರೆಗೆ ಕಳಿಸಲಾಯಿತು. ಎಪ್ಪತ್ತು ದಿನಗಳ ಕಾಲ ಅಲ್ಲಿಯೇ ಇದ್ದರು. ಆಗ ಅವರ ಜೀವನದಲ್ಲಿ ಸಂಪೂರ್ಣ ಬದಲಾವಣೆಯಾಯಿತು. ಅಲ್ಲಿ ಅವರಲ್ಲಿ ಒಂದು ತರಹದ ಅಧ್ಯಾತ್ಮಿಕ ಶಕ್ತಿ ಪ್ರವೇಶಿಸಿತು. ಅವರ ನಿರ್ಣಯ ನಿಶ್ಚಿತವಾಯಿತು. ಅಲ್ಲಿಂದ ಅವರು ಮರಳಿದ ನಂತರ ತನ್ನ ನೌಕರಿಗೆ ರಾಜೀನಾಮೆ ನೀಡಿದರು.

ಬಹುಶಃ ಈ ಅಧ್ಯಾತ್ಮಿಕ ಚಿಂತನೆಗಳ ಮೂಲಕ ಅವರು ಮೋದಿಜೀಯವರ ಪ್ರೀತಿಗೆ ಪಾತ್ರರಾಗಿರಬಹುದು.

ಯಡಿಯೂರಪ್ಪನವರು ವಿನಂತಿಸಿದರೂ ಕೂಡ ಅಣ್ಣಾ ಮಲೈ ತಮ್ಮ ನೌಕರಿಗೆ ರಾಜೀನಾಮೆ ನೀಡಿದ್ದನ್ನು ವಾಪಸ್ ಪಡೆಯಲಿಲ್ಲ. ನಂತರ ಒಂದು ವರ್ಷಗಳ ಕಾಲ ಅವರು ಸಾಮಾನ್ಯ ಯುವಕರಿಗಾಗಿ "Be the Leaders" ಎಂಬ ಹೆಸರಿನ ಫೌಂಡೇಶನ್ ನಡೆಸಿದರು.

ನಂತರ ದೆಹಲಿಯಿಂದ ಚಕ್ರ ತಿರುಗಿತು. ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರು ಅಣ್ಣಾ ಮಲೈ ಅವರನ್ನು ಸಂಪರ್ಕಿಸಿದರು. ಅವರ ಮನವೊಲಿಸಿ ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆಗೊಳ್ಳುವ ಹಾಗೆ ಮಾಡಲಾಯಿತು. ತಮಿಳುನಾಡಿನಲ್ಲಿ ಶೂನ್ಯ ಸಂಖ್ಯೆಯಲ್ಲಿ ಇರುವ ಭಾರತೀಯ ಜನತಾ ಪಕ್ಷದ ರಾಜ್ಯಾಧ್ಯಕ್ಷನನ್ನಾಗಿ ೨೦೨೧ ರಲ್ಲಿ ಅವರನ್ನು ನೇಮಿಸಲಾಯಿತು.

ನಂತರದ ಒಂದೂವರೆ ವರ್ಷದಿಂದ ಅವರು ತಮಿಳುನಾಡಿನಲ್ಲಿ ತಮ್ಮ ಹೆಸರಿನ ಅಭೂತಪೂರ್ವ ಬಿರುಗಾಳಿಯನ್ನೇ ಎಬ್ಬಿಸಿದರು.

ಇದೀಗ ಅಲ್ಲಿ ಅವರು ಓರ್ವ ಸಿನಿಮಾ ಸ್ಟಾರ್ ಗಳಂತೆ ಪ್ರಸಿದ್ಧಿ ಪಡೆದಿದ್ದಾರೆ. ಅಲ್ಲಿ ಅವರು ಕಳೆದ ಒಂದೂವರೆ ವರ್ಷದಿಂದ ಮಾಡಿದ ಜನೋಪಯೋಗಿ ಕೆಲಸಗಳ ಕುರಿತು ಬರೆಯಲು ತೊಡಗಿದರೆ ಅದೊಂದು ದೊಡ್ಡ ಲೇಖನವೇ ಆಗುವುದು. ಕರುಣಾನಿಧಿಯವರ ಊರಿನಲ್ಲಿ ಹೋಗಿ ಅಣ್ಣಾ ಮಲೈ ಬೃಹತ್ ಸಮಾವೇಶ ಏರ್ಪಡಿಸಿದರು. ಮೊನ್ನೆ ನರೇಂದ್ರ ಮೋದಿ ಚೆನ್ನೈ ಗೆ ಹೋದಾಗ ಅಲ್ಲಿ ನಡೆದ ರೋಡ್ ಶೋ ಹಿಂದಿನ ಎಲ್ಲ ರೆಕಾರ್ಡ್ ಮುರಿದಿತ್ತು. ಅಷ್ಟೊಂದು ಪ್ರಚಂಡ ರೀತಿಯಲ್ಲಿ ಅದು ಅಲ್ಲಿ ಯಶಸ್ವಿಯಾಯಿತು. ಅಲ್ಲಿನ ಯುವಕರು ಅಣ್ಣಾ ಮಲೈ ಅವರ ಭಕ್ತರಾಗಿದ್ದಾರೆ. ಎಪ್ರೀಲ್ ೨೦೨೩ ರಲ್ಲಿ ಅವರು ಇಡೀ ತಮಿಳುನಾಡಿನ ೨೩೪ ವಿಧಾನಸಭಾ ಮತಕ್ಷೇತ್ರದಲ್ಲಿ ಪಾದಯಾತ್ರೆ ನಡೆಸಿ ಜನರನ್ನು ಜಾಗೃತಗೊಳಿಸುವ ಕೆಲಸ ಮಾಡಿದರು.

ಆದರೆ ಅಲ್ಲಿನ ರಾಜಕೀಯ ಪರಿಸ್ಥಿತಿ, ಸಿನಿಮಾಗಳಲ್ಲಿ ತೋರಿಸುವಂತೆ ಒಂದು ಥರಾ ಕ್ರೂರತೆಯಿಂದ ಕೂಡಿದೆ. ಅಣ್ಣಾ ಮಲೈ ಅವರನ್ನು ಮುಗಿಸಲು ನೋಡಲಾಗುತ್ತಿದೆ. ಅಣ್ಣಾ ಮಲೈ ಸುರಕ್ಷಿತವಾಗಿ ಏನಾದರೂ ಉಳಿದರೆ, ೨೦೨೪ ರ ತಮಿಳುನಾಡಿನ ಲೋಕಸಭೆಯ ಫಲಿತಾಂಶ ಅಚ್ಚರಿಯದಾಗಿರುತ್ತವೆ. ೨೦೨೬ ರ ತಮಿಳುನಾಡಿನ ವಿಧಾನಸಭೆಯ ಫಲಿತಾಂಶ ಅದಕ್ಕಿಂತಲೂ ಆಶ್ಚರ್ಯಕರ.

ಕೆ. ಅಣ್ಣಾ ಮಲೈ ನನ್ನ ದೃಷ್ಟಿಯಲ್ಲಿ ೨೦೨೪ ರ 'ಮ್ಯಾನ್ ಆಫ್ ದ ಇಯರ್ ' ಆಗಿದ್ದಾರೆ.

* * *

◆ ನೀಲಕಂಠ ದಾತಾರ

# ಮತ ಮಗಳಿದ್ದಂತೆ, ಅದನ್ನು ಮಾರಿಕೊಳ್ಳಬೇಡಿ!!

ಪ್ರಪಂಚದ ಅತೀ ದೊಡ್ಡ ಸಫಲ ಪ್ರಜನತಂತ್ರ ಸಂವಿಧಾನವೆಂಬ ಹೆಮ್ಮೆ ಹೊಂದಿದ ರಾಷ್ಟ್ರ ಭಾರತ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೂಲ ಆತ್ಮವೇ ಪ್ರಜೆಗಳು. ಚುನಾವಣೆ ಮತ್ತು ಮತದಾನ ಒಂದೇ ನಾಣ್ಯದ ಎರಡು ಮುಖಗಳು. ಚುನಾವಣೆ ಪ್ರಕ್ರಿಯೆ ಪರಿಪೂರ್ಣವಾಗುವುದೇ ಮತದಾರರಿಂದ,ಮತ ಚಲಾಯಿಸುವವನೇ ಮತದಾರ.



ಜಾತಿ,ಲಿಂಗ,ಧರ್ಮ,ಹುಟ್ಟು ಸಾಮಾಜಿಕ ಸ್ಥಾನ ಮಾನ ಮುಂತಾದವುಗಳ ಆಧಾರದ ಮೇಲೆ ಯಾವುದೇ ತಾರತಮ್ಯ ಮಾಡದೇ ಈ ರಾಷ್ಟ್ರದಲ್ಲಿ 18 ವರುಷ ತುಂಬಿದ ಎಲ್ಲ ವಯಸ್ಕ ಪ್ರೌಢ ಪ್ರಜೆಗಳಿಗೆ ಮತ ಚಲಾಯಿಸುವ ಹಕ್ಕು ನಮ್ಮ ದೇಶದ ಆತ್ಮ ಎನಿಸಿಕೊಂಡ ಡಾ.ಅಂಬೇಡ್ಕರ್ ವಿರಚಿತ "ಭಾರತದ ಸಂವಿಧಾನ"ದಲ್ಲಿ ನೀಡಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಕೊಂಡ ನಮ್ಮ ಭಾರತ ದೇಶ ಅನಕ್ಷರಸ್ಥ ಜನರೇ ತುಂಬಿಕೊಂಡ ಈ ದೇಶದಲ್ಲಿ ಪ್ರಜೆಗಳೇ ದೇವರುಗಳು ಪ್ರಭುಗಳೇ ಪೂಜಾರಿಗಳು ಎಂಬ ಮಾತನ್ನು ಎಲ್ಲರೂ ಚೆನ್ನಾಗಿ ಅರಿತುಕೊಂಡು ಮತದಾನ ಪ್ರಕ್ರಿಯೆಯಲ್ಲಿ ಶ್ರದ್ಧೆಯಿಂದ ಪಾಲ್ಗೊಳ್ಳಬೇಕು. ಪ್ರತಿ 5 ವರುಷಕ್ಕೊಮ್ಮೆ ಬರುವ ಈ ಚುನಾವಣೆ ಪರ್ವದಲ್ಲಿ ಮತದಾರ ಪ್ರಭುಗಳು ಮೊದಲು ಪ್ರಬುದ್ಧರಾಗಬೇಕು.ಆದರೆ ಈ ಪ್ರಬುದ್ಧತೆ ಬರುವುದು ದೇವರ ಅನುಗ್ರಹದಿಂದಲ್ಲ. ಮೊಟ್ಟ ಮೊದಲು ನಾವೆಲ್ಲರೂ ಶಿಕ್ಷಣ ಪಡೆಯಬೇಕು.ಶಿಕ್ಷಣ ಎಂಬ ಬೆಳಕು ನಮಗೆ ಒಳ್ಳೆಯದು ಯಾವುದು? ಕೆಟ್ಟದು ಯಾವುದು? ನ್ಯಾಯ, ಅನ್ಯಾಯ, ಚಿಂತನ ಮಂಥನ ಮಾಡಲು ಹಚ್ಚುವ ಒಂದು ಅದ್ವಿತೀಯ ಶಕ್ತಿಯನ್ನು ನೀಡುತ್ತದೆ.ಈ ದೇಶದ ಹಣೆಬರಹ ಬರೆಯುವವನು ಯಾವುದೇ ದೇವ ದೇವತೆಗಳಲ್ಲ ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕು.ನಮ್ಮ ಭಾರತ ದೇಶದಲ್ಲಿ ಬಹುತೇಕ ಮತದಾರರು ಪೂರ್ವಾಗ್ರಹ ಪೀಡಿತರಾಗಿ ಮತದಾನ ಮಾಡುತ್ತಲೇ ಬಂದಿರುವುದು ಒಂದು ವಿಪರ್ಯಾಸ. ಕಾಟಾಚಾರಕ್ಕೆ ಮತದಾನ ಮಾಡದೇ ವಿವೇಚನೆಯಿಂದ ಮತ ಚಲಾಯಿಸಬೇಕು. ನಮ್ಮ ಒಂದು ಮತ ಹಾಕದಿದ್ದರೆ ದೇಶವೇನೂ ಹಾಳಾಗುವುದಿಲ್ಲ, ಎಂಬ ಉಡಾಫೆಯನ್ನು ಬಿಟ್ಟು ನಮಗೆ ಯೋಗ್ಯ ಇರುವ ಅಭ್ಯರ್ಥಿಗೆ ಮತ ನೀಡಿ ನಮ್ಮ ಅಮೂಲ್ಯ ಹಕ್ಕನ್ನು ಸದುಪಯೋಗಪಡಿಸಿಕೊಳ್ಳಬೇಕು. ಶಿಕ್ಷಣ ನಮಗೆ ಜಾಗೃತಿ ಹಾಗೂ ಅರಿವು ಮೂಡಿಸಿದೆ, ಆದರೆ ವೈಚಾರಿಕತೆ ಒಡಮೂಡದೇ ಇರುವುದು ವಾಸ್ತವ ಸತ್ಯ ಚುನಾವಣಾ ಅಖಾಡಕ್ಕೆ ಇಳಿಯುವ ನಾಯಕರು ಇತ್ತೀಚಿನ ಚುನಾವಣೆಗಳಲ್ಲಿ ಮತದಾರರನ್ನು ಸೆಳೆಯಲು ತೆರೆ ಮರೆಯಲ್ಲಿ ಅನೇಕ ಕಸರತ್ತುಗಳನ್ನು ನಡೆಸಿ ವಸ್ತ್ರ, ಆಭರಣ, ಗರಿ ಗರಿ ನೋಟು, ಸಾರಾಯಿ ಪಾಕೆಟಗಳನ್ನು ಕೊಟ್ಟು ಮತದಾರರನ್ನು ತಾತ್ಕಾಲಿಕವಾಗಿ ಸಂತೃಪ್ತಗೊಳಿಸುವ ಕಾರ್ಯ ಮಾಡುತ್ತಾರೆ.ಇಲ್ಲಿ ಮತದಾರರು ಸ್ವಲ್ಪ ಆಲೋಚನೆ ಮಾಡಬೇಕು. ಹಳ್ಳಿಗಳು ಉದ್ದಾರವಾಗಬೇಕಾದರೆ ಯೋಗ್ಯ ವ್ಯಕ್ತಿಗೆ ಮತ ನೀಡುವ ದಿಟ್ಟ ಸಂಕಲ್ಪ ಮಾಡಬೇಕು. ಇತ್ತೀಚೆಗೆ ಈ ಜಾತ್ಯತೀತ ರಾಷ್ಟ್ರದಲ್ಲಿ ಪ್ರಜೆಗಳನ್ನು ಜಾತಿಯ ಆಧಾರದ ಮೇಲೆ ಮತದಾರರ ಮೇಲೆ ತೀವ್ರ ಪ್ರಭಾವ ಬೀರಿ ಮತ ನೀಡುವಂತೆ ಪ್ರೇರೇಪಿಸುವ ಕಾರ್ಯ ಮಾಡುತ್ತಿರುವುದು ಅತ್ಯಂತ ವಿಷಾದನೀಯ. ಪ್ರಸ್ತುತ ಈ ದೇಶದಲ್ಲಿ ಸಾರ್ವತ್ರಿಕ ಲೋಕಸಭಾ ಚುನಾವಣೆಗೆ ಹಲವು ಹಂತಗಳಲ್ಲಿ ಮುಹೂರ್ತ ನಿಗಧಿಯಾಗಿದೆ. ಮತದಾನ ಇದು ನಮ್ಮ ಪವಿತ್ರ ಹಕ್ಕು. ಸುಸಂಸ್ಕೃತ ಒಳ್ಳೆಯ ಯೋಗ್ಯತೆ ಇರುವ ವ್ಯಕ್ತಿಗೆ ನಮ್ಮ ಅಮೂಲ್ಯ ಮತ ನೀಡಿ ಮತದಾನದ ಹಕ್ಕನ್ನು ಸದ್ಬಳಕೆ ಮಾಡಿಕೊಳ್ಳಬೇಕು. ನಮ್ಮ ಒಂದು ಮತ ಕೋಟಿ ರೂಪಾಯಿಗಳಿಗಿಂತಲೂ ಅಮೂಲ್ಯ.ಅದಕ್ಕೆ ಎಂದಿಗೂ ಬೆಲೆ ಕಟ್ಟಲಾಗದು. ಮತದಾರರು ತಮ್ಮ ಆತ್ಮಸಾಕ್ಷಿಯಾಗಿ ಸ್ವಯಂ ಪ್ರೇರಣೆಯಿಂದ ನಿಗಧಿಪಡಿಸಿದ ಮತಗಟ್ಟೆಗೆ ಆಗಮಿಸಿ ಮತ ಚಲಾವಣೆ ಮಾಡಿ ಬರಬೇಕು. ಒಂದೊಂದು ಸಂದರ್ಭದಲ್ಲಿ ಮತ ನೀಡುವ ಪೂರ್ವದಲ್ಲಿ ಮತದಾರರಿಗೆ ಪಕ್ಷ ನಿಷ್ಠೆ ಹಾಗೂ ವ್ಯಕ್ತಿ ನಿಷ್ಠೆ ಕಾಡುವುದು ಸಹಜ. ಈ ಸಂದರ್ಭದಲ್ಲಿ ನಿಮಗೆ ಸರಿ ಎನಿಸಿದ ಯೋಗ್ಯ ಅಭ್ಯರ್ಥಿಗಳಿಗೆ ಮತ ನೀಡಬೇಕು.ಅಥವಾ ನಿಮಗೆ ಪಕ್ಷ ನಿಷ್ಠೆ ಹಾಗೂ ವ್ಯಕ್ತಿ ನಿಷ್ಠೆ ಬೇಡ ಎನಿಸಿದರೆ "ನೋಟಾ" ಎಂಬ ಬಟನ್ ಒತ್ತುವ ಮೂಲಕ ತಿರಸ್ಕಾರ ಮಾಡುವ ಅನುಕೂಲತೆಯನ್ನು ಚುನಾವಣಾ ಆಯೋಗ ನೀಡಿದೆ ಎಂಬುದು ಗಮನಾರ್ಹ ಸಂಗತಿ.ನಾನೇಕೆ ಇವರಿಗೆ ಮತ ನೀಡಬೇಕು? ನನ್ನ ಒಂದು ಮತ ಹಾಕದಿದ್ದರೆ ನಡೆಯುತ್ತದೆ ಎಂದು ಮನೆಯಲ್ಲಿ ಕುಳಿತು ಉದಾಸೀನ ಮಾಡದೇ ಮತದಾನ ಪ್ರಕ್ರಿಯೆಯಲ್ಲಿ ನಿಷ್ಠೆ ಪ್ರಾಮಾಣಿಕವಾಗಿ ಪಾಲ್ಗೊಂಡು ಮೂಲಭೂತ ಸಮಸ್ಯೆಗಳನ್ನು ಈಡೇರಿಸುವ ದೇಶದ ಹಿತ ಕಾಪಾಡುವ ಸುಸಂಸ್ಕೃತ, ನಿಷ್ಠಾವಂತ, ಕ್ರಿಯಾಶೀಲ ಪ್ರಜೆಗಳ ಪ್ರೀತಿ ವಿಶ್ವಾಸ ಸಂಪಾದಿಸುವ ಜಾತ್ಯತೀತ, ಜನಪರ ಕಾಳಜಿ ಹೊಂದಿರುವ ಕರುಣಾಮಯಿ, ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನ ಮಾಡುವ ಸಮರ್ಥ ವ್ಯಕ್ತಿಗೆ ಮತ ನೀಡುವ ಮೂಲಕ ಈ ನಾಡು ಕಲ್ಯಾಣ ಕರ್ನಾಟಕವಾಗಲು ಹಾಗೂ ಈ ವಿಶಾಲವಾದ ದೇಶವು ಪ್ರಬುದ್ಧ ದೇಶವಾಗಲು ಕಾರಣಿಕರ್ತರಾಗಬೇಕು. "ನಾನು ನಿಮಗೆ ಮತದಾನದ ಅಧಿಕಾರ ಕೊಡಿಸಿದ್ದು ರಾಜರಾಗಿ ಎಂದು ಹೊರತು ಗುಲಾಮರಾಗಿ ಎಂದಲ್ಲ" ಎಂಬ ಸಂವಿಧಾನ ಶಿಲ್ಪಿ, ವಿಶ್ವರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಈ ಧೀರೋದಾತ್ತ ನುಡಿಯನ್ನು ಕೂಲಂಕುಷವಾಗಿ ಪ್ರತಿಯೊಬ್ಬ ಭಾರತೀಯರು ಚಿಂತನ ಮಂಥನ ಮಾಡಬೇಕು.ರಾಜನಾಗುವುದು, ಗುಲಾಮನಾಗುವುದು ನಮ್ಮ ಕೈಯಲ್ಲಿದೆ. ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡುವ ಮುನ್ನ ಆಳವಾಗಿ ಆಲೋಚನೆ ಮಾಡಬೇಕು.ಭ್ರಷ್ಟ ದುಷ್ಟರನ್ನು ದೂರಿಕರಿಸಿ ಶಿಷ್ಟರಿಗೆ ಮೊದಲ ಆದ್ಯತೆ ಕೊಟ್ಟು ಆಯ್ಕೆ ಮಾಡಿದರೆ ನಮಗೂ ಹಿತ. ಈ ನಾಡಿಗೂ ದೇಶಕ್ಕೂ ಒಳಿತಾಗುವುದು. ಹೀಗೆ ನಾವೆಲ್ಲರೂ ಮಾಡುವುದರಿಂದ ನಿಜಕ್ಕೂ ಪ್ರಜಾಪ್ರಭುತ್ವದ ಮೌಲ್ಯಗಳು ಗಟ್ಟಿಗೊಳ್ಳುವುದರಲ್ಲಿ ಎರಡು ಮಾತಿಲ್ಲ. "ಮತ ಮಗಳಿದ್ದಂತೆ ಅದನ್ನು ಅಯೋಗ್ಯರಿಗೆ ಕೊಡಬಾರದು" ಇದು ಡಾ.ಅಂಬೇಡ್ಕರ್ ಉವಾಚ. .ಈ ನಿಟ್ಟಿನಲ್ಲಿ ಪ್ರಜೆಗಳು ಪ್ರಜ್ಞಾವಂತರಾಗಬೇಕು ಪ್ರಬುದ್ಧರಾಗಬೇಕು. ಬಾಬಾಸಾಹೇಬರು ಹೇಳಿದ ಈ ಅಮೂಲ್ಯ ನುಡಿಯನ್ನು ಅರ್ಥ ಮಾಡಿಕೊಂಡು ಮತ ಮೌಲ್ಯದ ಮಹತ್ವ ಅರಿತು ಮತದಾನ ಮಾಡೋಣ. ಪ್ರಜಾಪ್ರಭುತ್ವ ಗಟ್ಟಿಗೊಳ್ಳಲು ನಾವೆಲ್ಲರೂ ಪರಿಶ್ರಮಿಸೋಣ.

* * *

**ಲೇಖನ :**
**ಡಾ. ಜಯವೀರ ಎ. ಕೆ.**
**ಕನ್ನಡ ಪ್ರಾಧ್ಯಾಪಕರು**
**ಕೆ. ಎಲ್.ಇ ಪದವಿ**
**ಮಹಾವಿದ್ಯಾಲಯ ಶಿರಗುಪ್ಪಿ**

# ನೇಹಾ ಹತ್ಯೆ, ಹಿಂದು ಸಂಘಟನೆಗಳಿಂದ ಪ್ರತಿಭಟನೆ

## ಗುಪ್ತಚರ ಇಲಾಖೆ ಸತ್ತೋಗಿದೆಯಾ: ಪಿ.ಎಚ್. ಪೂಜಾರ ಕಿಡಿ

**ತೇರದಾಳ :** ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಇದುವರೆಗೆ 8 ಅಮಾಯಕರ ಹತ್ಯೆಗಳಾಗಿವೆ. ರಾಜ್ಯದಲ್ಲಿ ಗುಪ್ತಚರ ಇಲಾಖೆ ಇದೆಯೋ ಅಥವಾ ಸತ್ತೋಗಿದೆಯೋ ಎಂದು ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ ಸರಕಾರದ ವಿರುದ್ಧ ಕಿಡಿಕಾರಿದರು.

ಹುಬ್ಬಳ್ಳಿಯಲ್ಲಿ ನೇಹಾ ಹಿರೇಮಠ ಯುವತಿಯ ಕೊಲೆಯನ್ನು ಖಂಡಿಸಿ ಶನಿವಾರ ಪಟ್ಟಣದಲ್ಲಿ ಹಿಂದು ಸಂಘಟನೆಗಳು ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಕೇವಲ ಮತ ಓಲೈಕೆಗೆ ಮಾತ್ರ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಸರಕಾರ ರಾಜ್ಯದ ಜನತೆಗೆ ದ್ರೋಹ ಬಗೆಯುವ ಕೆಲಸ ಮಾಡುತ್ತಿದೆ. ಶಾಂತಿ ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದ್ದು, ಅಧಿಕಾರದಲ್ಲಿ





ಮುಂದೆವರೆಯಲು ಕಾಂಗ್ರೆಸ್ ಪಕ್ಷಕ್ಕೆ ಯೋಗ್ಯತೆ ಇಲ್ಲ ಎಂದು ಹರಿಹಾಯ್ದರು. ಲವ್ ಜಿಹಾದ ತಗಡೆಯಲು ಆಗದ ರಾಜ್ಯ ಸರಕಾರ ಕೊಲೆಯಾದ ನೇಹಾ ಮೇಲೆ ಇಲ್ಲಸಲ್ಲದ ಗೂಬೆ ಕೂಡಿಸುವುದು ಸರಿಯಲ್ಲ. ರಾಜ್ಯದಲ್ಲಿ ಭಯೋತ್ಪಾದನೆ ಅವಕಾಶ ನೀಡುವ ಕೆಲಸ ಕಾಂಗ್ರೆಸ್ ಸರಕಾರ ಮಾಡುತ್ತಿದೆ. ಹಾಡುಹಗಲೆ ಬರ್ಬರವಾಗಿ ಯುವತಿಯನ್ನು ಕೊಲೆ ಮಾಡುವ ದುಸ್ಸಾಹಸ ನಡೆಸುತ್ತಾನೆ ಎಂದರೆ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಎಲ್ಲಿಗೆ ಬಂದು ನಿಂತಿದೆ ಎಂಬುದು ಅರಿತುಕೊಳ್ಳಿ. ಯಾವುದೇ ಮುಲಾಜು ಇಲ್ಲದೆ ನೇಹಾ ಕೊಲೆ ಆರೋಪಿ ಫಯಾಜ್‌ನಿಗೆ ಕಠಿಣ ಶಿಕ್ಷೆ ನೀಡುವ ಮೂಲಕ ಅವಳ ಸಾವಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು. ಇಲ್ಲದಿದ್ದರೆ ಈ ಹೋರಾಟ ಇಷ್ಟಕ್ಕೆ ನಿಲ್ಲುವುದಿಲ್ಲ. ಅಮಾಯಕರ ಶಾಪ ನಿಮಗೆ ತಟ್ಟುವುದೆ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ರಾಜ್ಯಪಾಲ ಹಾಗೂ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ವಿಶೇಷ ತಹಸೀಲ್ದಾರ್ ವಿಜುಕುಮಾರ ಕಡಕೋಳ ಮುಖಾಂತರ ಸಲ್ಲಿಸಿದರು. ಬಿಜೆಪಿ ಗ್ರಾಮೀಣ ಮಂಡಳ ಅಧ್ಯಕ್ಷ ಸುರೇಶ ಅಕ್ಕಿವಾಟ, ಯುವಮೋರ್ಚಾ ಅಧ್ಯಕ್ಷ ಲಕ್ಕಪ್ಪ ಪಾಟೀಲ, ಮಹಾವೀರ ಕೊಕಟನೂರ, ಪ್ರವೀಣ ತುಬಚಿ, ಆನಂದ ಕಂಪು, ಶಂಕರ ಹುನ್ನೂರ, ಸಿದ್ದು ಅಮ್ಮಣಗಿ, ಸದಾಶಿವ ಹೊಸಮನಿ, ಸಂತೋಷ ಅಕ್ಕೆನ್ನವರ, ಕೇದಾರಿ ಪಾಟೀಲ, ರಾಮಣ್ಣ ಹಿಡಕಲ್, ಅನಿಲ ಗುಬಚಿ, ನಿಂಗಪ್ಪ ಮಾಲಗಾಂವಿ, ಮುರಗೇಶ ಮಿರ್ಜಿ, ಮುತ್ತಪ್ಪ ಮುಳ್ಳಟ್ಟಿ, ಆನಂದ ಮಧುಮಲಿ, ಸತ್ಯಪ್ಪ ಚವಜ ಮತ್ತಿತರಿದ್ದರು.

# ನಿರ್ಭೀತಿಯಂದ ಯೋಗ್ಯ ವ್ಯಕ್ತಿಗೆ ಮತ ನೀಡಿ: ಪ್ರದೀಪ

**ಜಮಖಂಡಿ :** ದೇಶದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆ ಹೊಂದಿರುವ ಏಕೈಕ ಪರಮೋಚ್ಚ ಅಧಿಕಾರವೆಂದರೆ ಅದು ಮತದಾನ. ನಾವು ನೀವೆಲ್ಲರು ನಿರ್ಭೀತಿಯಿಂದ ಯೋಗ್ಯ ವ್ಯಕ್ತಿಗೆ ಮತ ನೀಡುವ ಮೂಲಕ ದೇಶವನ್ನು ಅಭಿವೃದ್ಧಿ ಪಥದಲ್ಲಿ ನಡೆಸಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಕಾರ್ಖಾನೆ ಆಡಳಿತ ವಿಭಾಗ ಮುಖ್ಯಸ್ಥ ಪ್ರದೀಪ ರೆಡ್ಡಿ ಹೇಳಿದರು.



ಭಾರತ ಚುನಾವಣಾ ಆಯೋಗ, ಜಿಲ್ಲಾ ಪಂಚಾಯತ ಮತ್ತು ಜಿಲ್ಲಾ ಆಡಳಿತ ಆಶ್ರಯದಲ್ಲಿ ಜಮಖಂಡಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಕಾರ್ಮಿಕರಿಗಾಗಿ ಮತದಾನ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆಸೆ-ಆಮೀಶ ಮತ್ತು ಒತ್ತಡಗಳಿಗೆ ಬಲಿಯಾಗಿ ಮತವನ್ನು ಮಾರಾಟ ಮಾಡಬಾರದು. ದೇಶದ ಸುಧಾರಣೆಯ ಕುರಿತು ಅಲ್ಲಲ್ಲಿ ಮಾತನಾಡುವ ನಾವು ಮಹತ್ವದ ಚುನಾವಣೆಗಳ ಸಂದರ್ಭಗಳಲ್ಲಿ ಮತವನ್ನು ಚಲಾಯಿಸುವುದೆ ಇಲ್ಲ. ಆದ್ದರಿಂದ ದೇಶದ ರಕ್ಷಣೆ, ಸಾರ್ವಭೌಮತ್ವ ಮತ್ತು ಅಭಿವೃದ್ಧಿ ವಿಷಯವಾಗಿ ನಮಗೆ ಸೂಕ್ತವೆನಿಸಿದ ವ್ಯಕ್ತಿಗೆ ಮತ ದಾನ ಮಾಡುವುದು ಬಹಳ ಅವಶ್ಯವಿದೆ ಎಂದರು.

ಬಾಗಲಕೋಟೆ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗಂಗಾಧರ ದೇಸಾಯಿ ಮಾತನಾಡಿ, ವಿಶ್ವದಲ್ಲಿಯೇ ಅತೀದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದ ದೇಶವೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದಲ್ಲಿ ಪ್ರತಿಯೊಬ್ಬರು ಮತದಾನ ಮಾಡುವುದು ಅವಶ್ಯವಿದೆ. ನಮ್ಮ ನಡೆ ಮತಗಟ್ಟೆಯ ಕಡೆ ಎಂಬ ಧ್ಯೇಯದೊಂದಿಗೆ ಪ್ರತಿಯೊಬ್ಬರು ಮತದಾನ ಮಾಡಬೇಕು. ವಿದ್ಯಾವಂತರೆ ಇಂದು ಮತದಾನದಿಂದ ದೂರ ಉಳಿಯುವುದು ಖೇದಕರವಾಗಿದೆ. ಮತದಾನದ ದಿನದಂದು ಎಲ್ಲ ಕಾರ್ಮಿಕರಿಗೆ ಸರಕಾರವು ರಜೆ ಘೋಷಿಸಿದ್ದು ಎಲ್ಲರು ಕಡ್ಡಾಯವಾಗಿ ಕುಟುಂಬ ಸಮೇತರಾಗಿ ವಯಸ್ಕರೆಲ್ಲರು ಮತಗಟ್ಟೆಗೆ ಹೋಗಿ ಮತದಾನ ಮಾಡಬೇಕು ಎಂದರು.

ವೇದಿಕೆಯಲ್ಲಿ ಕಾರ್ಖಾನೆಯ ಉಪಮುಖ್ಯಸ್ಥ ಶ್ರೀ ವಿ.ಎ.ಕಲಶೆಟ್ಟಿ, ಹಣಕಾಸು ವಿಭಾಗದ ಮುಖ್ಯಸ್ಥ ರಜನೀಶ ವರ್ಮಾ ಸಹಿತ ಹಲವರು ಇದ್ದರು.

ಕಬ್ಬುವಿಭಾಗದ ಅಧಿಕಾರಿ ಬಸವರಾಜ ಗಿರಗಾಂವಿ ಸ್ವಾಗತಿಸಿದರು. ಮಾನವ ಸಂಪನ್ಮೂಲ ವಿಭಾಗದ ಮಲ್ಲು ಚೌದ್ರಿ ನಿರೂಪಿಸಿ ವಂದಿಸಿದರು.

# ವರ್ತಕರ ಸಂಘಗಳ ಸದಸ್ಯರಲ್ಲಿ ರಮೇಶ ಜಿಗಜಿಣಗಿ ಮತಯಾಚನೆ

**ವಿಜಯಪುರ :** ಲೋಕಸಭಾ ಚುನಾವಣೆ ನಿಮಿತ್ತ ವಿಜಯಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಂಸದ ರಮೇಶ ಜಿಗಜಿಣಗಿ ಅವರು ನಗರದ ಎಪಿಎಂಸಿ ಮಂಗಲ ಕಾರ್ಯಾಲಯದಲ್ಲಿ ವರ್ತಕರ ಸಭೆ ನಡೆಸಿ ವಿವಿಧ ವರ್ತಕರ ಸಂಘಸಂಸ್ಥೆಗಳ ಸದಸ್ಯರಲ್ಲಿ ಈ ಬಾರಿ ತಮಗೆ ಬೆಂಬಲಿಸಿ ಬಿಜೆಪಿ ಪರ ಮತ ಹಾಕುವಂತೆ ಕೋರಿದರು.




ಈ ವೇಳೆ ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ದೇಶದ ಸಮಗ್ರ ಅಭಿವೃದ್ಧಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಕೊಡುಗೆ ಸಾಕಷ್ಟಿದೆ. ಕಳೆದ ಹತ್ತು ವರ್ಷಗಳಲ್ಲಿ ಭಾರತ ವಿಶ್ವದ 5 ನೇ ಬಲಿಷ್ಠ ಆರ್ಥಿಕ ರಾಷ್ಟ್ರವಾಗಿ ಹೊರಹೊಮ್ಮಿದೆ. ಈ ಬಾರಿ ಮತ್ತೆ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತಕ್ಕೆ ಬಂದರೆ ಭಾರತವನ್ನು ವಿಶ್ವದ 3 ನೇ ಆರ್ಥಿಕ ಶಕ್ತಿಶಾಲಿ ರಾಷ್ಟ್ರ ಮಾಡುವುದರೊಂದಿಗೆ ವಿಕಸಿತ ಭಾರತ ಮಾಡುವ ಸಂಕಲ್ಪ ಮೋದಿ ತೊಟ್ಟಿದ್ದಾರೆ. ನಾನು ಬಹುವರ್ಷಗಳಿಂದ ವರ್ತಕರ ಸಂಘಸಂಸ್ಥೆಗಳಿಗೆ ಅವಕಾಶ ಬಂದಾಗಲೆಲ್ಲಾ ಸ್ಪಂದಿಸುವ ಕೆಲಸ ಮಾಡಿದ್ದೇನೆ. ಎಲ್ಲಾ ಮಾರುಕಟ್ಟೆ ವರ್ತಕರು, ವ್ಯಾಪಾರಸ್ಥರೊಂದಿಗೆ ಆತ್ಮೀಯ ಒಡನಾಟ ಹೊಂದಿದ್ದೇನೆ. ತಾವೆಲ್ಲಾ ಈ ಹಿಂದೆ ನನ್ನನ್ನು ಬೆಂಬಲಿಸಿದಂತೆ ಈ ಬಾರಿಯೂ ಬೆಂಬಲಿಸಿ ಮತ ಹಾಕುವ ಮೂಲಕ ಶಕ್ತಿ ತುಂಬಬೇಕು ಎಂದು ಜಿಗಜಿಣಗಿ ವರ್ತಕರಲ್ಲಿ ಮತಯಾಚನೆ ಮಾಡಿದರು.

ಮಾಜಿ ವಿಧಾನ ಪರಿಷತ್ ಸದಸ್ಯ ಅರುಣ್ ಶಹಾಪುರ, ಮಾಜಿ ಸಚಿವ ಅಪ್ಪಾಸಾಹೇಬ್ ಪಟ್ಟಣಶೆಟ್ಟಿ ಮಾತನಾಡಿ, ಬಿಜೆಪಿ ಸರ್ಕಾರದ ಸಾಧನೆಗಳು, ಜನಪರ ಹಾಗೂ ವ್ಯಾಪಾರ ವಾಣಿಜ್ಯೋದ್ಯಮ ಉತ್ತೇಜನದ ಕಾರ್ಯಗಳ ಬಗ್ಗೆ ಮಾತನಾಡಿ ಬಿಜೆಪಿ ಪರ ಬೆಂಬಲಿಸುವಂತೆ ಕೋರಿದರು.

ಸಭೆಯಲ್ಲಿ ನಗರದ ಮರ್ಚೆಂಟ್ ಅಸೋಸಿಯೇಷನ್ ಅಧ್ಯಕ್ಷ ರವಿಂದ್ರ ಬಿಜ್ಜರಗಿ, ಕಿರಾಣಾ ಬಜಾರ ಅಸೋಸಿಯೇಷನ್ ಅಧ್ಯಕ್ಷ ಲಾಲಾ ಶೇಠ, ಅಟೋಮೊಬೈಲ್ ಅಸೋಸಿಯೇಷನ್ ಅಧ್ಯಕ್ಷ ಗುರುಶಾಂತ್ ನಿಡೋಣಿ, ಕ್ಲಾಥ ಮರ್ಚೆಂಟ್ ಅಸೋಸಿಯೇಷನ್ ಅಧ್ಯಕ್ಷ ಗೋಕುಲ ಮಹಿಂದ್ರಕರ, ರಸಗೊಬ್ಬರ ಅಸೋಸಿಯೇಷನ್ ಅಧ್ಯಕ್ಷ ಬಸವರಾಜ ಕೋರಿ, ಆಯಿಲ್ ವೀಲ್ ಅಸೋಸಿಯೇಷನ್ ಅಧ್ಯಕ್ಷ ರಮೇಶ್ ನಿಡೋಣಿ, ಗ್ರಾಮೊದ್ಯೋಗ ಸಂಸ್ಥೆಯ ಸಿದ್ದಣ್ಣ ಸಜ್ಜನ, ಅಡತ ಬಜಾರ ಕಾರ್ಯದರ್ಶಿ ಅಮಲ ತೋನಶ್ಯಾಳ, ಪೆಟ್ರೋಲಿಯಂ ವ್ಯಾಪಾರಸ್ಥರಾದ ಅರುಣ ಹುಂಡೇಕರ ಹಾಗೂ ಗಣ್ಯ ವ್ಯಾಪಾರಸ್ಥರು ಹಾಗೂ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಭೆಯಲ್ಲಿ ಮತಯಾಚನೆ ಮಾಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗಂಗಾಧರ ಜೋಗುರ, ಚಂದ್ರಶೇಖರ ಬಳಾಗಾನೂರ, ನೀಲೇಶ ಶಾಹಾ, ಜಯಾನಂದ ತಾಳಿಕೋಟಿ, ಪ್ರವೀಣ ವಾರದ, ಮನೋಜ ಬಗಲಿ, ಅಶೋಕ ಮಸಳಿ ಉಪಸ್ಥಿತರಿದ್ದರು.

# ಕಾಂಗ್ರೆಸ್ ಮೈನಾರಿಟಿ ಉಪಾಧ್ಯಕ್ಷರಾಗಿ ಉಸ್ಮಾನ ನೇಮಕ



**ತಾಳಿಕೋಟೆ :** ಕಾಂಗ್ರೆಸ್ ಪಕ್ಷದ ತಾಳಿಕೋಟೆ ತಾಲೂಕಾ ಮೈನಾರಿಟಿ ಉಪಾಧ್ಯಕ್ಷರನ್ನಾಗಿ ಜಿಲ್ಲಾಧ್ಯಕ್ಷರ ಆದೇಶದ ಮೇರೆಗೆ ಉಸ್ಮಾನ ಎಂ ಭಾಗವಾನ

ಅವರನ್ನು ನೇಮಕ ಮಾಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ಚೋರಗಸ್ತಿ ಅವರು ಆದೇಶ ಹೊರಡಿಸಿದ್ದಾರೆ.

ಆದೇಶ ತಲುಪಿದ ಕ್ಷಣದಿಂದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಸ್ಥಳೀಯ ನಾಯಕರ ಸಹಕಾರದೊಂದಿಗೆ ಪಕ್ಷದ ಸಂಘಟನೆ ಮತ್ತು ಭಲವರ್ದನೆಗೆ ಕಾರ್ಯೋನ್ಮುಖರಾಗಬೇಕೆಂದು ಉಸ್ಮಾನ ಭಾಗವಾನ ಅವರಿಗೆ ನೀಡಿದ ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

# ಬಿಜೆಪಿ ದೇಶಭಕ್ತಿ ಗುತ್ತಿಗೆ ಪಡೆದಿದೆಯೇ?

## ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಶಾಸಕ ಲಕ್ಷ್ಮಣ ಸವದಿ ಪ್ರಶ್ನೆ

**ಕೊಪ್ಪಳ :** 'ದೇಶದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಹೋರಾಟ ಮಾಡಿದ್ದರೂ ಬಿಜೆಪಿಯವರು ದೇಶಭಕ್ತಿಯನ್ನು ತಾವೇ ಗುತ್ತಿಗೆ ಪಡೆದುಕೊಂಡವರಂತೆ ನಡೆದುಕೊಳ್ಳುತ್ತಿದ್ದಾರೆ. ನಮಗೆ ದೇಶಭಕ್ತಿಯಿಲ್ಲವೇ' ಎಂದು ಶಾಸಕ ಲಕ್ಷ್ಮಣ ಸವದಿ ಪ್ರಶ್ನಿಸಿದರು.



ಇಲ್ಲಿನ ತಾಲ್ಲೂಕು ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಅಭ್ಯರ್ಥಿ ಕೆ. ರಾಜಶೇಖರ ಹಿಟ್ನಾಳ ಪರ ಮತಯಾಚಿಸಿ ಮಾತನಾಡಿದ ಅವರು, 'ಭಾರತ ಮಾತಾ ಕಿ ಜೈ ಎನ್ನುವ ಘೋಷಣೆ ಬಿಜೆಪಿಯವರ ಅಪ್ಪನ ಮನೆಯ ಆಸ್ತಿಯಲ್ಲ, ಪ್ರತಿಯೊಬ್ಬರ ಹಕ್ಕು. ದೇಶದ ಮೇಲೆ ಅಭಿಮಾನ, ಪ್ರೀತಿ ಬಿಜೆಪಿಗರಿಗೆ ಗುತ್ತಿಗೆ ಕೊಟ್ಟಿದೆಯಾ? ಇನ್ನು ಮುಂದೆ ಕಾಂಗ್ರೆಸ್‌ನಲ್ಲಿ ಭಾರತ ಮಾತಾ ಕಿ ಜೈ ಎನ್ನುತ್ತೇವೆ' ಎಂದರು.

ಮುಷ್ಠಿ ಕೈ ಹಿಡಿದು ಬಿಜೆಪಿಯವರಿಗೆ ಕೇಳುವ ತನಕ ಜೋರಾಗಿ ಘೋಷಣೆ ಕೂಗಿ ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದ ಅವರು 'ಬಿಜೆಪಿಯವರು ದೇಶದ ರಕ್ಷಣೆಗೆ ಮೋದಿ ಅವರಿಗೆ ಮತ ಹಾಕಿ ಎಂದು ಹೇಳುತ್ತಿದ್ದಾರೆ. ನಾವೇನು ದೇಶಭಕ್ತರಲ್ಲವೇ. ಬುಲೆಟ್ ರೈಲು, ನದಿಜೋಡಣೆ, ಡಾಲರ್ ಬೆಲೆ ಇವೆಲ್ಲವೂ ಮಾತಿಗೆ ಮಾತ್ರ ಸೀಮಿತವಾಗಿವೆ' ಎಂದು ಟೀಕಿಸಿದ ಅವರು ಕೊಪ್ಪಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಬಸವರಾಜ ಕ್ಯಾವಟರ್ ವಿರುದ್ಧವೂ ಹರಿಹಾಯ್ದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಮಾತನಾಡಿ, 'ನಮ್ಮ ಪಕ್ಷದವರು ಸಾಧನೆ ಜನರ ಮುಂದಿಟ್ಟು ಮತ ಕೇಳುತ್ತಿದ್ದಾರೆ. ಬಿಜೆಪಿಯವರು ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿ ಯಾವ ಕೆಲಸವನ್ನೇ ಮಾಡಿಲ್ಲ. ಜನರ ಮುಂದೆ ಯಾವ ವಿಷಯ ಮುಂದಿಟ್ಟು ಮತ ಕೇಳುತ್ತಾರೆ' ಎಂದು ಪ್ರಶ್ನಿಸಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿ, 'ಕೊಟ್ಟ ಮಾತಿನಂತೆ ನಡೆದುಕೊಂಡಿದ್ದೇವೆ. ಇದು ಸುಳ್ಳು ಮತ್ತು ಸತ್ಯದ ನಡುವಿನ ಚುನಾವಣೆಯಾಗಿದ್ದು, ಕೆಲಸ ಮಾಡಿದವರಿಗೆ ಮತ ನೀಡಿ. ರಾಜಶೇಖರ ಹಿಟ್ನಾಳ ಅವರಿಗೆ ಮತ ನೀಡಿ ಗೆಲ್ಲಿಸಬೇಕು' ಎಂದು ಮನವಿ ಮಾಡಿದರು.

ಸಚಿವ ಬಿ.ನಾಗೇಂದ್ರ, 'ಬಸವರಾಜ ರಾಯರಡ್ಡಿ ಅವರನ್ನು ಹಣಕಾಸು ಸಚಿವರನ್ನಾಗಿ ಮಾಡುವಂತೆ ಪಕ್ಷದ ಎಲ್ಲ ನಾಯಕರ ಬಳಿ ಮನವಿ ಮಾಡುವೆ. ಬಿಜೆಪಿಯ ಡೋಂಗಿಗಳಿಗೆ ಮತ ಕೊಡಬೇಡಿ' ಎಂದು ಮನವಿ ಮಾಡಿದರು.

ರಾಜಶೇಖರ ಹಿಟ್ನಾಳ ಮಾತನಾಡಿ, 'ಹಿಂದಿನ ಚುನಾವಣೆಯಲ್ಲಿ ಕೆಲವೇ ಮತಗಳ ಅಂತರದಲ್ಲಿ ಸೋಲು ಕಂಡಿದ್ದೇನೆ. ಈ ಬಾರಿ ನಿಮ್ಮೆಲ್ಲರ ಸಹಕಾರದಿಂದ ಮತ್ತೆ ಚುನಾವಣೆಗೆ ಸ್ಪರ್ಧೆ ಮಾಡಿದ್ದೇನೆ. ನನಗೆ ಮತ ನೀಡಿ ಗೆಲ್ಲಿಸಬೇಕು' ಎಂದು ಮನವಿ ಮಾಡಿದರು.

ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಶಾಸಕರಾದ ರಾಘವೇಂದ್ರ ಹಿಟ್ನಾಳ, ಹಂಪನಗೌಡ ಬಾದರ್ಲಿ, ಬಿ.ಎಂ. ನಾಗರಾಜ, ವಿಧಾನ ಪರಿಷತ್ ಸದಸ್ಯ ಶರಣೇಗೌಡ ಬಯ್ಯಾಪುರ, ಮುನಿರಾಬಾದ್? ಕಾಡಾ ಅಧ್ಯಕ್ಷ ಹಸನಸಾಬ್? ದೋಟಿಹಾಳ, ಜಿಲ್ಲಾ ಮಹಿಳಾ ಕಾಂಗ್ರೆಸ್? ಅಧ್ಯಕ್ಷೆ ಮಾಲತಿ ನಾಯಕ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೃಷ್ಣ ಇಟ್ಟಂಗಿ, ಬ್ಲಾಕ್? ಅಧ್ಯಕ್ಷರಾದ ಕೃಷ್ಣಾರಡ್ಡಿ ಗಲಬಿ, ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷ ರೆಡ್ಡಿ ಶ್ರೀನಿವಾಸ, ಕೆಪಿಸಿಸಿ ಕಾರ್ಯದರ್ಶಿ ಬಸವನಗೌಡ ಬಾದರ್ಲಿ, ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಆರ್. ಶ್ರೀನಾಥ್, ಮಾಜಿ ಸಚಿವ ಮಲ್ಲಿಕಾರ್ಜುನ ನಾಗಪ್ಪ ಸೇರಿದಂತೆ ಪಕ್ಷದ ವಿವಿಧ ಘಟಕಗಳ ಮುಖಂಡರು ಪಾಲ್ಗೊಂಡಿದ್ದರು.

# ಸಮಾಜ ಸೇವಕ ಅರ್ಜುನ ಜಮಾದಾರ ಅವರಿಗೆ ಸನ್ಮಾನ



**ತಿಕೋಟಾ :** ಕಲಬುರಗಿಯ ಜಿಲ್ಲೆಯ ಶರಣರತ್ನ ಪ್ರಶಸ್ತಿ ಪಡೆದುಕೊಂಡ ಅರ್ಜುನ ಜಮದಾರ ಇವರಿಗೆ ಇಂದು ಸಮಾಜದ ಕುಲಬಾಂಧವರು ಶಾಲು ಹೊದಸಿ ಹಾರ ಹಾಕಿ ಆತ್ಮೀಯವಾದ ಸನ್ಮಾನ ಮಾಡಲಾಯಿತು. ಅರ್ಜುನ ಜಮಾದಾರ ಇವರು ಕನ್ನಡ ನಾಡು, ನುಡಿ, ನೆಲ, ಜಲದ ರಕ್ಷಣೆಗಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜ ಸೇವೆಯಲ್ಲಿ ಸಲ್ಲಿಸಿರುವ ಅಮೂಲ್ಯ ಸೇವೆಯನ್ನು ಪರಿಗಣಿಸಿ ಇವರಿಗೆ ಕಲಬುರ್ಗಿ ಜಿಲ್ಲೆಯ ಪ್ರತಿಷ್ಠಿತ ಸಂಸ್ಥೆಯಾದ

ಶ್ರೀ ಶರಣಬಸವೇಶ್ವರ ಸಂಸ್ಥೆಯ ಕಡೆಯಿಂದ ಈ ಸಾಲಿನ ಶರಣ ರತ್ನ ಪ್ರಶಸ್ತಿಯನ್ನು ಸಮಾಜ ಸೇವಕ ಅರ್ಜುನ ಜಮಾದಾರ ಅವರಿಗೆ ನೀಡಲಾಗಿದ್ದು, ಮಾಣಿಕೇಶ್ವರಿ ಕಾಲೋನಿಯ ಕೋಕಿಲಾ ಪರಮೇಶ್ವರಿ ದೇವಾಲಯದಲ್ಲಿ ಇಂದು ಜಗನ್ನಾಥ ಈರುಳ್ಳಿ, ಸಾಯಬಣ್ಣ ವಡಗೇರಿ, ಮಲ್ಲಿಕಾರ್ಜುನ ಜೊಕೆ, ರಾಜೇಂದ್ರ ಜಳಕಿ, ಪ್ರಕಾಶ ತಲಾರಿ, ಚಂದ್ರಶೇಖರ ಸರ್, ದೇವೆಂದ್ರಪ್ಪ ಆನೆಗುಂದಿ, ಬಸವರಾಜ ಸುರಪೂರ, ರಾಜು ಸೊನ್ನ, ಡಾ.ಹಣಮಂತ್ರಾಯ ಸೇರಿದಂತೆ ಅನೇಕರು ಅರ್ಜುನ ಜಮದಾರ ಇವರಿಗೆ ಆತ್ಮಿಯವಾದ ಸನ್ಮಾನ ಮಾಡಿ ಅವರಿಗೆ ಶುಭಾಶಯಗಳನ್ನು ತಿಳಿಸಿದರು.

# 2024-25ನೇ ಶೈಕ್ಷಣಿಕ ಸಾಲಿನ ಬಿ.ಎ/ಬಿ.ಕಾಂ/ಬಿ.ಎಸ್ಸಿ/ಬಿ.ಸಿ.ಎ/ಬಿ.ಬಿ.ಎ ಪ್ರಥಮ ವರ್ಷದ ಪದವಿ ಕೋರ್ಸಗಳ ಪ್ರವೇಶ ಪ್ರಾರಂಭ

**ಬಾಗಲಕೋಟೆ :** ಬಾಗಲಕೋಟೆ ನವನಗರದ ಸೆಕ್ಟರ್ ನಂಬರ್ 43 ರಲ್ಲಿರುವ ನ್ಯಾಕ್ ಬಿ+ ಮಾನ್ಯತೆ ಪಡೆದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಸಕ್ತ 2024-25 ನೇ ಶೈಕ್ಷಣಿಕ ಸಾಲಿನ 3 ವರ್ಷದ ಪದವಿ ಕೋರ್ಸಗಳಾದ ಬಿ.ಎ/ಬಿ.ಕಾಂ/ಬಿ.ಎಸ್ಸಿ/ಬಿ.ಬಿ.ಎ/ಬಿ.ಸಿ.ಎ ಪ್ರಥಮ ವರ್ಷದ ಪದವಿ ಕೋರ್ಸಗಳಿಗೆ ದಿನಾಂಕ:22/04/2024 ರಿಂದ ಪ್ರವೇಶ ಪ್ರಾರಂಭವಾಗುತ್ತಿದ್ದು, ಪದವಿ ಕೋರ್ಸಗಳ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಅಗತ್ಯ ದಾಖಲಾತಿ ಪ್ರತಿಗಳೊಂದಿಗೆ ಕಾಲೇಜಿಗೆ ಬಂದು ಪ್ರವೇಶ ಪಡೆಯಬೇಕು ಎಂದು ಪ್ರಾಚಾರ್ಯ ಡಾ.ಅರುಣಕುಮಾರ ಗಾಳಿ ಅವರು ಪತ್ರಿಕಾ ಪ್ರಕಟನೆಗೆ ತಿಳಿಸಿದ್ದಾರೆ.

ಪ್ರವೇಶಕ್ಕೆ ಬೇಕಾದ ದಾಖಲಾತಿಗಳು (ಝುರಾಕ್ಸ್ ದ್ವಿಪ್ರತಿಯಲ್ಲಿ) : ಕಾಲೇಜಿನ ಗೂಗಲ್ ಫಾರ್ಮ್, ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಪ್ರಾಚಾರ್ಯರಿಂದ ದೃಢೀಕರಿಸಿರುವ ದ್ವಿತಿಯ ಪಿಯುಸಿ ಅಂಕಪಟ್ಟಿ, ಪಿಯುಸಿ ಮೂಲ ವರ್ಗಾವಣೆ ಪ್ರಮಾಣ ಪತ್ರ (ಲಭ್ಯವಿದ್ದಲ್ಲಿ), ಜಾತಿ ಮತ್ತು ಆದಾಯ ಪ್ರಮಾಣ ಪತ್ರದ, ಆಧಾರ ಕಾರ್ಡ, ಬ್ಯಾಂಕ್ ಪಾಸ್‌ಬುಕ್, 3 ಪೋಟೊ, ಮತ್ತು ಸಿ.ಬಿ.ಎಸ್.ಇ ಬೋರ್ಡ ವಿದ್ಯಾರ್ಥಿಗಳು, 3 ವರ್ಷದ ಡಿಪ್ಲೋಮ್ ವಿದ್ಯಾರ್ಥಿಗಳು, ಬಾಗಲಕೋಟೆ ವಿಶ್ವದ್ಯಾಲಯದಿಂದ ಅರ್ಹತಾ ಪ್ರಮಾಣ ಪತ್ರ ಹಾಗೂ ಎಲ್ಲಾ ದಾಖಲಾತಿಗಳೊಂದಿಗೆ ಪದವಿ ಪ್ರಥಮ ವರ್ಷದ ಪ್ರವೇಶ ಪಡೆಯಬೇಕೆಂದು ಪ್ರಕಟನೆಯಲ್ಲಿ ಹೇಳಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9738731675 ಈ ದೂರವಾಣಿಗೆ ಸಂಪರ್ಕ ಮಾಡಲು ತಿಳಿಸಿದ್ದಾರೆ.

**ವಿ.ಸೂ:** 1)ಆಧಾರ ಕಾರ್ಡ ಮತ್ತು ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿ ಹೆಸರು ಒಂದೆ ತೆರನಾಗಿರಬೇಕು.

2)ಸರ್ಕಾರ ನಿಗಧಿಪಡಿಸಿದ ಪ್ರವೇಶ ಶುಲ್ಕ ಮಾತ್ರ ಇರುತ್ತದೆ. ಯಾವುದೆ ತರಹದ ಡೊನೇಶನ್ ಇರುವುದಿಲ್ಲ.

3)ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸೌಲಭ್ಯ ಇರುತ್ತದೆ.

4) ಕಾಲೇಜಿನ ಟೆಲಿಗ್ರಾಂ ಗ್ರೂಪ್ ಸೇರಲು https://t.me/gfgcvidyamandir ಈ ಲಿಂಕ ಬಳಸಿ.

# ನೇಹಾ ಕೊಲೆ ಖಂಡಿಸಿ ಪ್ರತಿಭಟನೆ ಮನವಿ

**ರಬಕವಿ-ಬನಹಟ್ಟಿ :** ಹುಬ್ಬಳಿ ನಗರದ ಬಿವಿಬಿ ಶಿಕ್ಷಣ ಸಂಸ್ಥೆಯಲ್ಲಿ ಎಮ್‌ಸಿಎ ಓದುತ್ತಿದ್ದ ವಿಧ್ಯಾರ್ಥಿನಿ ನೇಹಾ ಹಿರೇಮಠ. ಅವಳನ್ನು ಅದೇ ಸಂಸ್ಥೆಯಲ್ಲಿ ಬಿಸಿಎ ಓದುತ್ತಿದ್ದ ಆರೋಪಿ ಪಯಾಜ್ ಆತನು ಕಾಲೇಜ್ ಕ್ಯಾಂಪಸ್ ಒಳಗೆ ಆಕೆಯ ಮೇಲೆ ಚಾಕುವಿನಿಂದ ಹಲ್ಲೆಮಾಡಿ ಬರ್ಬರವಾಗಿ ಹತ್ಯೆಮಾಡಿದ್ದನ್ನು ಖಂಡಿಸಿ ರಾಜ್ಯದ ಮೂಲೆ ಮೂಲೆಗಳಲ್ಲಿ ಹಿಂದುಪರ ಸಂಘಟಣೆಗಳ ಜೊತೆಯಲ್ಲಿ ಜಂಗಮ ಸಮುದಾಯಗಳು ಪ್ರತಿಭಟಿಸುತ್ತಿವೆ.




ರಬಕವಿ-ಬನಹಟ್ಟಿ ತಾಲೂಕಿನ ಜಂಗಮ ಸಮುದಾಯದ ಬಾಂಧವರು ನೇಹಾ ಕೊಲೆ ಖಂಡಿಸಿ ಹಿಂದುಪರ ಸಂಘಟನೆಗಳ ಬೆಂಬಲದಲ್ಲಿ ಸಾಮೋಹಿಕವಾಗಿ ಪ್ರತಿಭಟಣೆ ಮಾಡಿ ತಹಶೀಲ್ದಾರರಿಗೆ ಮನವಿಯನ್ನು ಸಲ್ಲಿಸಿದರು. ಆರೋಪಿಯನ್ನು ಕೂಡಲೆ ಗಲ್ಲಿಗೆರಿಸಿದರೆ ಇಂಥಹ ಹೇಯಕೃತ್ಯಗಳು ನಿಲ್ಲಿಸಲು ಸಾದ್ಯವಾಗುತ್ತದೆಂದು ಜಂಗಮ ಸಮುದಾಯದ ಮುಖಂಡ ಗುರುಪಾದಯ್ಯ ಅಮ್ಮಣಗಿಮಠ. ಹೇಳಿದರು. ಇದರಂತೆ ಕುಟುಂಬಕ್ಕೆ ನ್ಯಾಯವನ್ನು ಒದಗಿಸುವ ನಿಟ್ಟಿನ ಕ್ರಮಗಳಲ್ಲಿ ರಾಜ್ಯಸರ್ಕಾರ ಮತ್ತು ಪೋಲೀಸ್ ಇಲಾಖೆಯ ಕಾರ್ಯವು ಪ್ರಾಮಾಣಿಕವಾಗಿ ಬೆಂಬಲಿತವಾಗಿರಬೇಕು ಇದರಲ್ಲಿ ಏನಾದರು ಕುಂಟಿತವಾಗಿ ಕಂಡುಬಂದರೆ ರಾಜ್ಯದ ಎಲ್ಲ ಜಂಗಮ ಸಮುದಾಯ ಹಾಗು ಹಿಂದುಪರ ಸಂಘಟನೆಗಳ ಬೆಂಬಲದಲ್ಲಿ ಬಿದಿಗಿಳಿದು ಭೀಕರ ಹೊರಾಟ ಮಾಡಬೇಕಾದಿತ್ತು ಎಂದು ಎಚ್ಚರಿಕೆ ನೀಡಿದರು.

ಪೋಲೀಸ್ ಇಲಾಖೆಯು ಯಾವದೆ ರಾಜಕೀಯದ ಒಳಸಂಚಿನ ಒತ್ತಡಕ್ಕೆ ಕೈಗೊಂಬೆಯಾಗದೆ ನೇಹಾ ಕುಟುಂಬಕ್ಕೆ ನ್ಯಾಯ ಒದಗಿಸಲು ಮುಂದಾಗಬೇಕು ಹಾಗೆ ಈ ಕೊಲೆಯ ಹಿಂದೆ ಸಂಚು ಮಾಡಿದ ಇನ್ನು ನಾಲ್ಕು ಜನರ ತಂಡ ಇರುವ ಬಗ್ಗೆ ರಾಜ್ಯದ ಜನರಲ್ಲಿ ಸಾಕಷ್ಟು ಸುದ್ಧಿ ಹರಡಕೊಂಡಿದ್ದು ಅವರನ್ನು ಕೂಡಾ ಶೀಘ್ರವಾಗಿ ಪತ್ತೆಮಾಡಿ ಜೈಲಿಗೆ ಅಟ್ಟಿ ಸರೀಯಾದ ಶಿಕ್ಷೆಗೆ ಗುರಿ ಮಾಡಬೇಕೆಂದು ರ-ಬ ನಗರಸಭಾ ಮಾಜಿ ಅಧ್ಯಕ್ಷ ಸಂಜು ತೆಗ್ಗಿ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ನಗರದ ಹಿಂದುಪರ ಸಂಘಟಿತ ಮುಖಂಡ ನಂದು ಗಾಯಕವಾಡ ಮಾತನಾಡಿ ಕೊಲೆಮಾಡಿದ ಆ ಕಟುಕ ಆರೋಪಿಯನ್ನು ಸ್ಥಳದಲ್ಲಿ ಎನ್,ಕೌಂಟರ ಮಾಡಿದರೆ ಸಮಾಜದಲ್ಲಿ ಸಧ್ಯ ಹುಟ್ಟಿರುವ ಆತಂಕದ ಬಯದ ಛಾಯೆ ಕಡಿಮೆಯಾಗುತ್ತದೆ. ಲವ್-ಜಿಹಾದ್ ಎಂಬ ಹೆಸರಿನಲ್ಲಿ ಇಂಥವರು ಹಿಂದು ಹೆಣ್ಣು ಮಕ್ಕಳನ್ನು ದಿಕ್ಕುತಪ್ಪಿಸುವ ಯತ್ನಗಳು ಮಾಡುವುದು ಅವರು ಮಾಡುವ ಸಂಚುಗಾರಿಕೆಯಲ್ಲಿ ಒಪ್ಪದ ಹೆಣ್ಣು ಮಕ್ಕಳನ್ನು ಕೊಲೆ ಮಾಡುವುದು ರಾಜ್ಯದಲ್ಲಿ ಹೆಚ್ಚಾಗುತ್ತಿದೆ. ಇದರ ಬಗ್ಗೆ ಹಿಂದುಪರ ಸಂಘಟಣೆಗಳು ಎಚ್ಚೆತ್ತುಕೊಂಡಿವೆ ಇದು ಹೀಗೆ ಮುಂದು ವರಿದರೆ ಲವ್‌ಜಿಹಾದಿಗಳನ್ನು ದೇಶದಿಂದ ಗಡಿಪಾರು ಮಾಡಲು ಉಗ್ರವಾದ ಹೋರಾಟ ಮಾಡಲು ಸಿದ್ದರಿದ್ದೆವೆ ಎಂದು ರಬಕವಿ-ಬನಹಟ್ಟಿ ತಾಲೂಕಾ ತಹಶೀಲ್ದಾರ ಗಿರಿಶ್ ಸ್ವಾದಿ. ಅವರಿಗೆ ಮನವಿಯನ್ನು ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಬನಹಟ್ಟಿ ಜಂಗಮ ಸಮುದಾಯದ ಮುಖಂಡ ದೊಡಯ್ಯ ಲಿಂಗದ್.. ದುಂಡಯ್ಯ ಕಾಡದೇವರ್. ಗಂಗಯ್ಯ ಹಿರೇಮಠ. ಸಂಜು ಅಮ್ಮಣಗಿಮಠ. ಮಾದೇವ ಮಠಪತಿ. ವಿವೇಕಾನಂದ ಹಿರೇಮಠ. ರಾಜು ಮಠಪತಿ. ಈಶ್ವರ ಕಾಡದೇವರ್. ವೀರಭದ್ರ ಶಾಸ್ತ್ರಿಹಿರೇಮಠ. ಶೀವಾನಂದ ಮಠದ. ರಾಜು ಮಠದ. ಹಾಗು ಎಬಿವಿಪಿ ಮುಖಂಡ ಹೇಮಂತ್ ಮಳಲಿ. ಶ್ರೀರಾಮ ಸೇನಾ ಮುಖಂಡ ಯಮನಪ್ಪಾ ಕೋರಿ. ಹಿಂದು ಜಾಗರಣ ಮುಖಂಡ ಭೀಮ್ಸಿ ಆಲ್ಗೋಂಡ. ಬಸವರಾಜ್ ಮನ್ನಿ. ಶಿವಾನಂದ ಕಾಗಿ. ಅಶೋಕ ರಾವಳ ಹಿಂದುಪರ ಸಂಘಟಿತ ಮುಖಂಡರು ಕಾರ್ಯಕರ್ತರು ಹಾಜರಿದ್ದರು.

# ಕನಮಡಿ ಚೆಕ್‌ಪೋಸ್ಟ್ ಭೇಟಿ ನೀಡಿದ ಅನುಪಕುಮಾರ




**ವಿಜಯಪುರ :** ವಿಜಯಪುರ ಲೋಕಸಭಾ ಚುನಾವಣೆ-2024ರ ವೆಚ್ಚ ವೀಕ್ಷಕ ಐ.ಆರ್.ಎಸ್‌ನ ಅಧಿಕಾರಿ ಅನುಪಕುಮಾರ ರವರು ಗುರುವಾರ ಬಬಲೇಶ್ವರ ಮತಕ್ಷೇತ್ರ ವ್ಯಕ್ತಿಯ ಕನಮಡಿ ಚೆಕ್ ಪೋಸ್ಟ್ ಪರಿಶೀಲಿದರು. ಚೆಕ್‌ಪೋಸ್ಟಗಳಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿಯ ಹಾಜರಾತಿ, ಶಾಮಿಯಾನ, ಕುಡಿಯುವ ನೀರು ಸೇರಿದಂತೆ ಚೆಕ್‌ಪೋಸ್ಟ್‌ಗಳ ವ್ಯವಸ್ಥೆಯ ಬಗ್ಗೆ ಮಾಹಿತಿ ಪಡೆದರು. ಚೆಕ್‌ಪೋಸ್ಟಗಳು ಸರಿಯಾಗಿ ಕಾರ್ಯ ನಿರ್ವಹಿಸಬೇಕು. ಚೆಕ್‌ಪೋಸ್ಟಳಿಗೆ ನಿಯೋಜನೆಗೊಂಡ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸರಿಯಾದ ಸಮಯಕ್ಕೆ ಪಾಳಿ ಅನುಸಾರ ಹಾಜರಾಗಿ ಕಾರ್ಯ ನಿರ್ವಹಿಸಬೇಕು.

ಪ್ರತಿಯೊಂದು ವಾಹನವನ್ನು ತಪಾಸಣೆಗೆ ಒಳಪಡಿಸಬೇಕು ಎಂದು ಜಿಲ್ಲಾಧಿಕಾರಿಗಳು ಸ್ಥಳದಲ್ಲಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

# ಲೋಕಸಭಾ ಚುನಾವಣೆ: ನಗರದಲ್ಲಿ ಬಿಜೆಪಿ ಅಭ್ಯರ್ಥಿ ಗದ್ದಿಗೌಡರ ರಿಂದ ಮತಯಾಚನೆ

## ದೇಶಕ್ಕೆ ಸಮರ್ಥ ನೇತೃತ್ವ ಹಾಗೂ ದಿಟ್ಟ ನಿರ್ಧಾರ ಮೋದಿಯಿಂದ ಸಾಧ್ಯ: ಚರಂತಿಮಠ

**ಬಾಗಲಕೋಟೆ :** ದೇಶದ ಅಭಿವೃದ್ಧಿಯ ಜೋತಗೆ ಸಮರ್ಥ ನೇತೃತ್ವದಲ್ಲಿ ದೇಶದ ಹಿತಕ್ಕಾಗಿ ದಿಟ್ಟ ನಿರ್ಧಾರ ಮೋದಿಯಿಂದ ಮಾತ್ರ ಸಾದ್ಯ ಎಂದು ಡಾ.ವೀರಣ್ಣ ಚರಂತಿಮಠ ಹೇಳಿದರು.

ಅವರು ಶುಕ್ರವಾರ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ಪಾದಯಾತ್ರೆ ಮೂಲಕ ಮನೆ ಮನೆಯ ಪ್ರಚಾರದಲ್ಲಿ ಭಾಗವಹಸಿ ಮತಯಾಚನೆ ಮಾಡಿ ಮಾತನಾಡಿದರು, ಟೆಂಟ್ ನಿಂದ ಭವ್ಯ ಮಂದಿರದಲ್ಲಿ ರಾಮಲಲ್ಲಾನ ವಿರಾಜಮಾನ,ಪ್ರಧಾನಿ ಮೋದಿಯಿಂದ ಪ್ರಾಣ ಪ್ರತಿಷ್ಠಾನದ ಮೂಲಕ ಸಾಕಾರವಾದ ರಾಮ ಮಂದಿರ, ಕಾಶ್ಮೀರದಲ್ಲಿ ದಶಕಗಳ ಭಯೋತ್ಪಾದನಾ ಚಟುವಟಿಕೆ ಅಂತ್ಯ ಮತ್ತು ಶಾಂತಿ ಸ್ಥಾಪನೆ ಮಾಡಿ ಆರ್ಟಿಕಲ್ 370 ಮತ್ತು 35ಎ ರದ್ದು ಮಾಡಿದ್ದು, ದೇಶದ್ಯಾಂತ



ಪೌರತ್ವ ತಿದ್ದುಪಡಿ ಕಾಯಿದೆ(ಸಿಎಎ) ಜಾರಿ, ಭಯೋತ್ಪಾಧನೆಯ ನಿಗ್ರಹಕ್ಕಾಗಿ ಎರಡು ಬಾರಿ ಪಾಕಿಸ್ತಾನದ ಮೇಲೆ ಸರ್ಜಿಕಲ್ ದಾಳಿ ಮಾಡಿ, ಅತ್ಯಂತ ಯಶಸ್ವಿ ವಿದೇಶಾಂಗ ನೀತಿಯ ಮೂಲಕ ಅಂತರಾಷ್ಟ್ರೀಯ ಒತ್ತಡ ಹೇರಲು ಯಶಸ್ವಿಯಾದ ಮೋದಿ ಸರಕಾರ ವಿಶ್ವದಲ್ಲಿ ಪ್ರಾಮುಖ್ಯತೆ ಪಡೆದಿದೆ, ದೇಶದ ಗಟ್ಟಿ ನಾಯಕತ್ವಕ್ಕಾಗಿ ಮೋದಿಯ ಬೆಂಬಲಿಸಿ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರಿಗೆ ಮತ ನೀಡಿ ಎಂದರು.

ನಗರಸಭೇ ಸದಸ್ಯೆ ಜ್ಯೋತಿ ಭಜಂತ್ರಿ, ರೇಖಾ ಕಲಬುರ್ಗಿ, ಸುಜಾತಾ ಶಿಂಧೆ, ಶರಣಪ್ಪ ಗುಳೇದ,ಸತೀಶ ಗಾಯಕವಾಡ, ಸಂಗನಗೌಡ ಗೌಡರ, ರಮೇಶ ಹೊನ್ನಳ್ಳಿ, ಪ್ರವೀಣ ಕೋಲೆ, ಸಿದ್ದು ಸರೂರ, ಚಂದ್ರು ಸರೂರ, ಮಹೇಶ ಅಂಗಡಿ, ರಾಜು ಗಾಣಿಗೇರ,ಗಣೇಶ ರಾಠೋಡ, ಯಂಕಣ್ಣ ಹಲಗಲಿ, ವೀರಣ್ಣ ಕಲ್ಲೂರ, ಕಪ್ಪಯ್ಯ ಮುತ್ತಿನಮಠ, ಬಸವರಾಜ ಮಾಗಿ, ಪಾಲಾಕ್ಷೀ ಕಟ್ಟಿಮಠ,ಸುರೇಶ ಹಿರೇಮಠ, ಬಸವರಾಜ ಹುನಗುಂದ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ನಗರದ ಬಾಂಬೆ ಚಾಳ.ಕೆಂಪ ರೋಡನಿಂದ ಪ್ರಾರಂಭವಾದ ಪಾದಯಾತ್ರೆ ನಗರಸಭೆ ಸದಸ್ಯೆ ಜೋತಿ ಭಜಂತ್ರಿ ಯವರ 18ನೇ ವಾರ್ಡಗಳಲ್ಲಿ ಸಂಚರಿಸಿ, ಪಾದಯಾತ್ರೆ ಮೂಲಕ ಮನೆ ಮನೆಗೆ ತೇರಳಿ ಬಿಜೆಪಿ ಅಭ್ಯರ್ಥಿ ಪರ ಮತಯಾಚನೆ ಮಾಡಲಾಯಿತು.

# ತಾತ್ಕಾಲಿಕ ವಾಹನಗಳ ಮಾರ್ಗ ಬದಲಾವಣೆ

**ಧಾರವಾಡ :** ಲೋಕಸಭೆ ಚುನಾವಣೆ ನಾಮಪತ್ರ ಸಲ್ಲಿಕೆ ನಿಮಿತ್ತ ದಿನಾಂಕ 15.04.2024 ರಿಂದ 18.04.2024 ರವರೆಗೆ ಧಾರವಾಡ ನಗರದಲ್ಲಿ ತಾತ್ಕಾಲಿಕವಾಗಿ ವಾಹನಗಳ ಮಾರ್ಗ ಬದಲಾವಣೆ ಮಾಡಲಾಗಿದೆ ಎಂದು ಮಹಾನಗರ ಪೊಲೀಸ್ ಆಯುಕ್ತರಾದ ರೇಣುಕಾ ಸುಕುಮಾರ ಅವರು ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಬೆಳಗಾವಿ ಕಡೆಯಿಂದ ಹುಬ್ಬಳ್ಳಿ ಕಡೆಗೆ ಹೋಗುವ ವಾಹನಗಳು- ಜುಬ್ಲಿ ಸರ್ಕಲ್, ಸಿಎಸ್‌ಐ ಕಾಲೇಜ್ ರೋಡ, ಲೈನ ಬಜಾರ ಮುಖಾಂತರ ಎನ್.ಟಿ.ಟಿ.ಎಫ್ ಕ್ರಾಸ್ ಮುಖಾಂತರ ಹುಬ್ಬಳ್ಳಿ ಕಡೆಗೆ ಹೋಗಬೇಕು.

ಸವದತ್ತಿ ಕಡೆಯಿಂದ ಧಾರವಾಡ ಕಡೆಗೆ ಬರುವ ವಾಹನಗಳು- ಡಿಪೋ ಸರ್ಕಲ್, ಗೊಲ್ಲರ ಓಣಿ ಕ್ರಾಸ್, ಕಮಲಾಪೂರ ಉಸುಕಿನ ಅಡ್ಡಾ, ಮರಾಠಾ ಕಾಲನಿ ರೋಡ ಮುಖಾಂತರ ಹೋಗಬೇಕು.

ನವಲಗುಂದ ಕಡೆಯಿಂದ ಧಾರವಾಡ ಕಡೆಗೆ ಬರುವ ವಾಹನಗಳು- ಚರಂತಿಮಠ ಗಾರ್ಡನ್ ಕ್ರಾಸ್, ಕಾಮನಕಟ್ಟಿ ಕೂಟ, ಹೊಸ ಯಲ್ಲಾಪೂರ ಸರ್ಕಲ್, ಸುಣ್ಣದ ಬಟ್ಟಿ ರೋಡ ಮೂಲಕ ಎಲ್.ಎಮ್.ವಿ ವಾಹನಗಳು ಮತ್ತು ಹೆಬ್ಬಳ್ಳಿ ಅಗಸಿ, ಡಿಪೋ ಸರ್ಕಲ್, ಗೊಲ್ಲರ ಓಣಿ, ಮರಾಠಾ ಕಾಲನಿ ರೋಡ ಮೂಲಕ ಬಸ್ಸುಗಳು ಹೋಗಬೇಕು.

ಹಳಿಯಾಳ ಕಡೆಯಿಂದ ಧಾರವಾಡ ಕಡೆಗೆ ಬರುವ ವಾಹನಗಳು- ದಾಸನಕೊಪ್ಪ ಸರ್ಕಲ್, ಜರ್ಮನ್ ಸರ್ಕಲ್, ಉಪನಗರ ಪಿ.ಎಸ್ ಮೂಲಕ ಹೋಗಬೇಕು.

ಗೋವಾ ಕಡೆಯಿಂದ ಧಾರವಾಡ ಕಡೆಗೆ ಬರುವ ವಾಹನಗಳು- ಜರ್ಮನ್ ಸರ್ಕಲ್, ಹಳೇ ಎಸ್.ಪಿ.ಆಫೀಸ್ ಕ್ರಾಸ್, ನಾಯಕ ಅಡ್ಡಾ ಕ್ರಾಸ್, ಹಳೇ ಬಸ್ ನಿಲ್ದಾಣ ಮೂಲಕ ಹೋಗಬೇಕು.

# ಕಲ್ಪನೆಗೂ ಮೀರಿದ ಅಭಿವೃದ್ಧಿಗಾಗಿ ಬಿಜೆಪಿ ಬೆಂಬಲಿಸಿ: ಬಸವಪ್ರಸಾದ ಜೊಲ್ಲೆ

**ಹಾರೂಗೇರಿ :** ಸಮೀಪದ ಯಲ್ಪಾರಟ್ಟಿ, ಸಿದ್ದಾಪುರ ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಕುಡಚಿ ವಿಧಾನಸಭೆ ಕ್ಷೇತ್ರದ ಯಲ್ಪಾರಟ್ಟಿ ಹಾಗೂ ಸಿದ್ದಾಪುರ ಗ್ರಾಮದಲ್ಲಿ ಬಿಜೆಪಿ ಅಧಿಕೃತ ಅಭ್ಯರ್ಥಿ ಅಣ್ಣಾಸಾಹೇಬ ಜೊಲ್ಲೆ ಅವರ ಪರವಾಗಿ ಬಸವಜ್ಯೋತಿ ಯೂಥ ಫೌಂಡೇಶನ ಅಧ್ಯಕ್ಷ ್ಯರಾದ ಶ್ರೀ. ಬಸವಪ್ರಸಾದ ಜೊಲ್ಲೆಯವರು ಪ್ರಚಾರ ಕೈಗೊಂಡು ಮತಯಾಚನೆ ಮಾಡಿದರು.ವಿಕಸಿತ ಭಾರತದ ಕನಸಿನ ನನಸಿಗೆ, ಸುಭದ್ರ ಸೈನಿಕ ಸೇವೆಗೆ, ಭಾರತದೊಂದಿಗಿನ ವಿದೇಶಗಳ ಬಾಂಧವ್ಯ ವೃದ್ಧಿಗಾಗಿ,ಶಿಕ್ಷಣದ ಮೂಲ ಆಶಯ ಈಡೇರಿಕೆಗಾಗಿ, ಸ್ತ್ರಿ ಸಮಾನತೆಯ ಸಧುದ್ದೇಶಕ್ಕಾಗಿ, ಕಲ್ಪನೆಗೂ ಮೀರಿದ ಅಭಿವೃದ್ಧಿಗಾಗಿ ಒಟ್ಟಾರೆ ದೇಶದ ಒಳಿತಿಗಾಗಿ ಮತ್ತೊಮ್ಮೆ ಪ್ರಧಾನ ಮಂತ್ರಿಗಳಾದ ಮಾನ್ಯ ನರೇಂದ್ರಮೋದಿಜಿಯವರ ಸರ್ಕಾರದ ರಚನೆಗಾಗಿ ಮತ್ತು ಚಿಕ್ಕೋಡಿಯ ಅಭಿವೃದ್ಧಿಗಾಗಿ ಅಣ್ಣಾಸಾಹೇಬ ಜೊಲ್ಲೆ ಅವರನ್ನು ಗೆಲ್ಲಿಸಬೇಕು ಎಂದು ಕರೆ ನೀಡಿದರು.ಈ ಸಂದರ್ಭದಲ್ಲಿ ಕುಡಚಿ ಮಾಜಿ ಶಾಸಕರು ಹಾಗೂ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಪಿ. ರಾಜೀವ ಮಾತನಾಡಿ,



ಚಿಕ್ಕೋಡಿ ಲೋಕಸಭಾ ವ್ಯಾಪ್ತಿಯಲ್ಲಿ ನೀರಾವರಿ, ದೇವಸ್ಥಾನಗಳ ಅಭಿವೃದ್ಧಿ, ರಸ್ತೆ ಸುಧಾರಣೆ, ಕುಡಿಯುವ ನೀರಿನ ಯೋಜನೆಗಳು ಹಾಗೂ ಇನ್ನಿತರ ಹಲವಾರು ಜನಪರ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಮಾನ್ಯ ಜೊಲ್ಲೆ ಅವರ ಕಾರ್ಯಕ್ಕೆ ತಾವು ಮತ್ತೊಮ್ಮೆ ಅಮೂಲ್ಯ ಮತ ನೀಡಿ ಆಶೀರ್ವದಿಸಬೇಕು ಎಂದು ಮತಯಾಚಿಸಿದರು.ಈ ಸಂದರ್ಭದಲ್ಲಿ ಸ್ಥಳೀಯ ಮುಖಂಡರು,ಗಣ್ಯರು ಹಾಗೂ ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

# ಸ್ವೀಫ ವತಿಯಿಂದ ವಿಶೇಷವಾಗಿ ಮತದಾರರ ಜಾಗೃತಿ ಜಾಥಾ

**ಮೂಡಲಗಿ :** ಕಳೆದ ಬಾರಿ ಚುನಾವಣೆಯಲ್ಲಿ ಕಡಿಮೆ ಮತದಾನವಾದ ವಿಭಾಗಗಳಾದ ವಿಭಾಗ ನಂ 38, 39, 40, 41, 42, ಈ ಏರಿಯಾಗಳಲ್ಲಿ ಮೂಡಲಗಿ ಪಟ್ಟಣದಲ್ಲಿ ಪುರಸಭೆ ಮೂಡಲಗಿ ಹಾಗೂ ತಾಲೂಕ Sveep ಸ್ವೀಫ ವತಿಯಿಂದ ವಿಶೇಷವಾಗಿ ಮತದಾರರ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು.

ಪುರಸಭೆ ಕಾರ್ಯಾಲಯದಿಂದ ಕಲ್ಮೇಶ್ವರ ವೃತ್ತ, ಬಸ್ ನಿಲ್ದಾಣ, ಕರೆಮ್ಮಾ ಸರ್ಕಲ್, ಬಸವೇಶ್ವರ ವೃತ್ತ, ಗಾಂಧೀ ಚೌಕ, ಕಂಕಣವಾಡಿ ಓಣಿ, ಬೀರಪ್ಪನಗುಡಿ ಏರಿಯಾ, ರಾಜೀವಗಾಂಧಿ ನಗರ, ಡಾಂಗೆ ಓಣಿ, ತಳವಾರ ಓಣಿ, ರಡ್ಡಿ ಓಣಿ, ಮುರಗೋಡ ಪ್ಲಾಟ, ಗಂಗಾನಗರವರೆಗೆ ಜಾಥಾ ಮಾಡಲಾಯಿತು. 2024 ರ ಲೋಕಸಭಾ ಸಾರ್ವತ್ರಿಕ ಚುನಾವಣೆಯ ಹಿನ್ನಲೆಯಲ್ಲಿ ಎಲ್ಲ ಮತದಾರರು ಕಡ್ಡಾಯವಾಗಿ ಮತದಾನ ಮಾಡಬೇಕು. ಸಂವಿಧಾನವು ಮತದಾರರಿಗೆ ನೀಡಿದ ದೊಡ್ಡ ವರವೆಂದರೆ ಮತದಾನದ ಹಕ್ಕು. ಮತದಾನ ಮಾಡುವುದೆಂದರೆ ಅದು ಪ್ರಜಾಪ್ರಭುತ್ವದ ಹಬ್ಬ. ಆದ ಕಾರಣ ಪ್ರತಿಯೊಬ್ಬರು ತಪ್ಪದೇ ಮತದಾನ ಮಾಡಲು ಜಾಥಾ ಕಾರ್ಯಕ್ರಮದುದ್ದಕ್ಕೂ ಘೋಷಣೆಗಳನ್ನು ಕೂಗಲಾಯಿತು. ಕರಪತ್ರಗಳನ್ನು ಹಂಚಲಾಯಿತು. ಈ ಸಂದರ್ಭದಲ್ಲಿ ಪುರಸಭೆಯ ಪ್ರಭಾರ ಮುಖ್ಯಾಧಿಕಾರಿ ಸಿ.ಬಿ.ಪಾಟೀಲ. ಹಾಗೂ ಪುರಸಭೆಯ ಸಿಬ್ಬಂದಿಯವರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಭಾಗವಹಿಸಿದ್ದರು.

# ಶಿವಬೋಧರಂಗ ಕೋ.ಆಪ್ ಸೊಸೈಟಿಗೆ ರೂ. 5.70 ಕೋಟಿ ಲಾಭ

**ಮೂಡಲಗಿ :** ಮೂಡಲಗಿಯ ಪ್ರತಿಷ್ಠಿತ ಹಣಕಾಸು ಸಂಸ್ಥೆಗಳಲ್ಲಿ ಒಂದಾದ ಶ್ರೀ ಶಿವಬೋಧರಂಗ ಅರ್ಬನ್ ಕೋ.ಆಪ್ ಕ್ರೆಡಿಟ್ ಸೊಸೈಟಿಯು 2024ರ ಮಾರ್ಚ್ ಅಂತ್ಯಕ್ಕೆ ರೂ. 5.70. ಕೋಟಿ ಲಾಭವನ್ನು ಗಳಿಸಿ ಪ್ರಗತಿಯಲ್ಲಿ ಸಾಗಿದೆ ಎಂದು ಅಧ್ಯಕ್ಷ ಬಸವರಾಜ ಗುಲಗಾಜಂಬಗಿ ತಿಳಿಸಿದರು.



ಗುರುವಾರ ಸೊಸೈಟಿಯ ಪ್ರಗತಿಯ ಕುರಿತು ಕರೆದಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಸದ್ಯ ಸೊಸೈಟಿಯು ರೂ. 5.71 ಕೋಟಿ ಶೇರು ಬಂಡವಾಳ, ರೂ. 26.42 ಕೋಟಿ ಕಾಯ್ದಿಟ್ಟ ನಿಧಿಗಳು, ರೂ. 336.64 ಕೋಟಿ ಠೇವುಗಳನ್ನು ಹೊಂದಿದೆ ಎಂದರು.

ಸೊಸೈಟಿಯು ಗ್ರಾಹಕರ ಭದ್ರತೆಗಾಗಿ ಇತರೆ ಬ್ಯಾಂಕ್‌ಗಳಲ್ಲಿ ರೂ. 110.36 ಕೋಟಿ ಹೂಡಿಕೆ ಮಾಡಿದೆ. ರೂ. 191.69 ಕೋಟಿ ವಿವಿಧ ಕ್ಷೇತ್ರಗಳಿಗೆ ಸಾಲವನ್ನು ನೀಡಿದೆ. ಸದ್ಯ ಸೊಸೈಟಿಯು ರೂ. 388.18 ಕೋಟಿ ದುಡಿಯುವ ಬಂಡವಾಳ ಹೊಂದಿದೆ ಎಂದರು.

ಸೊಸೈಟಿಯ ಉಪಾಧ್ಯಕ್ಷ ಸುಭಾಸ ಸೋನವಾಲಕರ ಮಾತನಾಡಿ ಸೊಸೈಟಿಯು ಈ ವರೆಗೆ 18 ಶಾಖೆಗಳನ್ನು ಹೊಂದಿದ್ದು ಎಲ್ಲ ಶಾಖೆಗಳು ಉತ್ತಮ ಪ್ರಗತಿಯಲ್ಲಿವೆ. ಇನ್ನೂ ಶಾಖೆಗಳನ್ನು ಪ್ರಾರಂಭಿಸುವ ಬಗ್ಗೆ ನಿರ್ಧರಿಸಲಾಗಿದೆ ಆಡಳಿತ ಮಂಡಳಿಯ ರವೀಂದ್ರ ಸೋನವಾಲ್ಕರ, ಅಶೋಕ ಹೊಸೂರ, ಡಾ.ಶಂಕರ ದಂಡಪ್ಪನವರ, ರೇವಪ್ಪ ಕುರುಬಗಟ್ಟಿ, ಪುಲಕೇಶಿ ಸೋನವಾಲ್ಕರ, ಶಿವಬಸು ಬೂದಿಹಾಳ, ವಿದ್ಯಾವತಿ ಸೋನವಾಲಕರ, ಮಂಜುಳಾ ಬಳಿಗಾರ, ಗಂಗವ್ವ ಸಣ್ಣಪ್ಪನವರ, ಹಣಮಂತ ಸಣ್ಣಕ್ಕಿ ಇವರ ಸಹಕಾರ ಪ್ರಗತಿಗೆ ಸಹಕಾರಿಯಾಗಿದೆ ಎಂದರು,

ಪತ್ರಿಕಾ ಗೋಷ್ಠಿಯಲ್ಲಿ ಪ್ರಧಾನ ವ್ಯವಸ್ಥಾಪಕ ಸುರೇಶ ನಾಶಿ, ಮಾರಾಟಾಧಿಕಾರಿ ಹಣಮಂತ ಕುಂಬಾರ, ಪ್ರಧಾನ ಕಛೇ-ರಿಯ ವ್ಯವಸ್ಥಾಪಕ ಮಹೇಶ ಮಾಲಗಾರ ಇದ್ದರು.

# 'ಮಹಾ' ನೀರು ಬಿಡಿಸುವಲ್ಲಿ ಸರ್ಕಾರದ ಪಾತ್ರ ಬೋಗಸ್ ಹೇಳುವದೇ ಬಿಜೆಪಿ ಚಾಳಿ



**ರಬಕವಿ-ಬನಹಟ್ಟಿ :** ಹಿಡಕಲ್ ಜಲಾಶಯದಿಂದ ಕಾಲುವೆ ಮೂಲಕ ಕೃಷ್ಣೆಗೆ 1 ಟಿಎಂಸಿಯಷ್ಟು ನೀರು ಹರಿಸುವಲ್ಲಿ ಸರ್ಕಾರದ ಆದೇಶದ ಮೂಲಕ ಹರಿಸಲಾಗಿದೆ. ಇದನ್ನು ಬಿಜೆಪಿಯವರು ರಾಜಕೀಯವಾಗಿ ಬಳಕೆ ಮಾಡಿಕೊಂಡು ನೀರು ಬಿಡಿಸುವಲ್ಲಿ ನಮ್ಮ ಪಾತ್ರವೆಂದು ಬೋಗಸ್ ಹೇಳಿಕೆ ನೀಡುತ್ತಿರುವದು ಸರಿಯಲ್ಲವೆಂದು ತೇರದಾಳ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ವಾಗ್ದಾಳಿ ನಡೆಸಿದರು.

ಅದರಂತೆ ಮಹಾರಾಷ್ಟ್ರ ಸರ್ಕಾರದೊಂದಿಗೆ ರಾಜ್ಯ ಸರ್ಕಾರವು ಮಾತುಕತೆ ಮೂಲಕ 1 ಟಿಎಂಸಿ ನೀರು ಬಿಡಿಸುವಲ್ಲಿನ ಮಾತುಕತೆಯೂ ಯಶಸ್ವಿ ಕಂಡಿದೆ. ಜನತೆಗೆ ತಪ್ಪು ಮಾಹಿತಿಯೊಂದಿಗೆ ನೀರು ಬಿಡುಗಡೆಯಲ್ಲಿ ಬೋಗಸ್ ಹೇಳಿಕೆಯನ್ನು ನಿಲ್ಲಿಸಬೇಕೆಂದು ಕೊಣ್ಣೂರ ಹೇಳಿದರು.

ಸಚಿವರಾದ ಸತೀಷ ಜಾರಕಿಹೊಳಿ, ಆರ್.ಬಿ. ತಿಮ್ಮಾಪೂರ, ಜೆ.ಟಿ. ಪಾಟೀಲ, ಎಚ.ವಾಯ್. ಮೇಟಿ,ಯಶವಂತರಾಯಗೌಡ ಪಾಟೀಲ ಸೇರಿದಂತೆ ಅನೇಕ ಶಾಸಕರ ನೇತೃತ್ವದಲ್ಲಿ ಕೃಷ್ಣೆಗೆ ನೀರು ಹರಿಸಲು ಶ್ರಮಿಸಿದ್ದಾರೆ. ನೀರು ಬಿಡಿಸುವಲ್ಲಿ ನಾನು ಕಾರಣವೆಂದು ಹೇಳುತ್ತಿರುವ ತೇರದಾಳ ಶಾಸಕ ಸಿದ್ದು ಸವದಿಯವರು ಬರೀ ಸುಳ್ಳಿನ ಸರಮಾಲೆಗಳನ್ನೇ ಬಿಚ್ಚಿಡುತ್ತಿದ್ದಾರೆಂದು ಆಪಾದಿಸಿದರು.

ಜನತೆಗೆ ಇಂತಹ ಸುಳ್ಳುಗಳನ್ನೇ ಹೇಳಿ ಆಡಳಿತ ನಡೆಸಿದ್ದಾರೆ. ಸವದಿಯವರಿಗೆ ತಾಕತ್ತಿದ್ದರೆ ಬಹಿರಂಗವಾಗಿ ಚರ್ಚೆಗೆ ಬರಲಿ ಅದನ್ನು ಬಿಟ್ಟು ನೀರಿನಲ್ಲಿ ರಾಜಕಾರಣ ನಡೆಸುವದು ಸಮಂಜಸವಲ್ಲವೆಂದು ಕೊಣ್ಣೂರ ಕಿಡಿಕಾರಿದರು.

# ಪೊಲೀಸ್ ವೀಕ್ಷಕರಾಗಿ ಎಂ.ಆರ್ಶಿ ನೇಮಕ

**ಬಾಗಲಕೋಟೆ :** ಬಾಗಲಕೋಟೆ ಲೋಕಸಭಾ ಚುನಾವಣೆ-2024ರ ಪೊಲೀಸ್ ವೀಕ್ಷಕರನ್ನಾಗಿ ಐ.ಪಿ.ಎಸ್ ಅಧಿಕಾರಿ ಎಂ.ಆರ್ಶಿ ಅವರನ್ನು ಭಾರತ ಚುನಾವಣಾಆಯೋಗವುನೇಮಕಮಾಡಿಆದೇಶಿಸಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ತಿಳಿಸಿದ್ದಾರೆ.

ಪೊಲೀಸ್ ವೀಕ್ಷಕರಾದ ಎಂ.ಆರ್ಶಿ (ಮೊನಂ.7899564337) ಅವರು ಈಗಾಗಲೇ ಜಿಲ್ಲೆಗೆ ಆಗಮಿಸಿದ್ದು, ವಿದ್ಯಾಗಿರಿಯ ನ್ಯೂ ಸರ್ಕ್ಯೂಟ್ ಹೌಸ್‌ನ ಮೊದಲನೇ ಮಹಡಿಯಲ್ಲಿ ಲಭ್ಯವಿರುತ್ತಾರೆ. ಸಾರ್ವಜನಿಕರು ಯಾವುದೇ ಮನವಿ, ಅಹವಾಲುಗಳಿದ್ದಲ್ಲಿ ಖುದ್ದಾಗಿ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

# ಪ್ರಜಾಪ್ರಭುತ್ವ ಬಲಪಡಿಸುವುದಕ್ಕೆ ನನ್ನ ಮೊದಲ ಸಲದ ಮತ

**ಧಾರವಾಡ :** ಜಗತ್ತು ಕಂಡ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂದರೆ ಅದು ಭಾರತ. ಭಾರತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವುದು ಡಾ. ಬಿ.ಆರ್. ಅಂಬೇಡ್ಕರ್ ರಚಿಸಿರುವ ಸಂವಿಧಾನದಿಂದಾಗಿ. ಈ ಪ್ರಜಾಪ್ರಭುತ್ವವನ್ನು ಬಲಪಡಿಸುವುದು ಅದು ಮತದಾನದ ಮೂಲಕ. ಪ್ರತಿಯೊಬ್ಬ ಮತದಾರರು ಪ್ರಜಾಪ್ರಭುತ್ವದ ಇಂದಿನ ನಂಬಿಕೆ ಮತ್ತು ನಾಳೆಯ ಭರವಸೆಗಾಗಿ ಮತದಾನ ಮಾಡಲೇಬೇಕು. ಪ್ರಸ್ತುತ ಲೋಕಸಭಾ ಚುನಾವಣೆಗೆ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಸೇರ್ಪಡೆಯಾಗಿರುವುದು ಸಂತೋಷದಾಯಕ ವಿಷಯ. ಹೀಗಾಗಿ ನನ್ನ ಮೊದಲ ಸಲದ ಮತವನ್ನು ಪ್ರಜಾಪ್ರಭುತ್ವ ಬಲಪಡಿಸುವುದಕ್ಕೆ ನೀಡುತ್ತೇನೆ. ಇದರಿಂದಾಗಿ ಬಲಿಷ್ಠ ರಾಷ್ಟ್ರವನ್ನು ನಿರ್ಮಾಣ ಮಾಡಬಹುದು. ಆದ್ದರಿಂದ ಪ್ರತಿಯೊಬ್ಬ ಮತದಾರರು ಕೂಡ ಭಾಗಿಯಾಗಿ.



"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State